4. ಶಾಸನ ರಚನೆ (ಪರ್ಯಾಲೋಚನೆ ಮತ್ತು ಅಂಗೀಕಾರ)

ಅ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಕಾನೂನಿನ (ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾಪ

ಅಧ್ಯಕ್ಷರು :- ಇದನ್ನು ಮೊದಲೇ ಮಂಡಿಸಿ ಆಗಿದೆ. ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಸಚಿವರು ಕಾನೂನಿನ (ತಿದ್ದುಪಡಿ) ವಿಧೇಯಕ, 2002ನ್ನು ಪರ್ಯಾಲೋಚಿಸಬೇಕೆಂಬ ಕೋರುತ್ತೇನೆ."

ಶ್ರೀ ಜಗದೀಶ್ ಶೆಟ್ಟರ್ :- ಡಿಸ್ಕಷನ್ ಮಾಡಬೇಕಲ್ವಾ.

ಶ್ರೀ ಡಿ.ಬಿ. ಚಂದ್ರೇಗೌಡ :- ವಿತ್ತೀಯ ಕಾರ್ಯಕಲಾಪ ಇದು. ತಾವು ತಪ್ಪು ತಿಳಿದುಕೊಂಡಿದ್ದೀರಿ. ಇದು ಕಾನ್‌ಸೆಕ್ವೆನ್ಸಿಯಲ್ ಬಿಲ್ ಮೋಟಾರು ವಾಹನಗಳ ತೆರಿಗೆ ವಿಧೇಯಕದ ಬಗ್ಗೆ ಚರ್ಚೆ ಮಾಡಲು ನನ್ನದೇನೂ ಅಭ್ಯಂತರ ಇಲ್ಲ. ಮೋಟಾರು ವಾಹನಗಳ ತೆರಿಗೆ ಎಂದು ಹೆಸರು ನೋಡಿದ ತಕ್ಷಣ ತೆರಿಗೆ ಅವರಿಗೆ ಬರುತ್ತದೆ ಎಂದಲ್ಲ. ಇದು ಟ್ಯಾಕೇಷನ್ ಬಿಲ್.

ಶ್ರೀ ಎ. ರಾಮದಾಸ್ :- ಹೇಗಿದ್ದರೂ ತಾವು ಅದರ ನಂತರ ಮೂರು ಬಿಲ್‌ಗಳ ಬಗ್ಗೆ ಹೇಳಿದ್ದೀರಿ, ಅದನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು :- 4-5 ಬಿಲ್‌ಗಳು ಇವೆ.

ಶ್ರೀ ಎ. ರಾಮದಾಸ್ :- 4 ಬಿಲ್‌ಗಳು ಇರಬಹುದು, ಮೋಟಾರು ವಾಹನಗಳ ತೆರಿಗೆ ಕೂಡ ಅದಕ್ಕೆ ಸೇರಿದ್ದು.

ಅಧ್ಯಕ್ಷರು :- ನೀವು ಏನಾದರೂ ಮಾತನಾಡಬೇಕಿದ್ದರೆ ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಸ್ವಲ್ಪ ದಯವಿಟ್ಟು ಕೇಳಿ. ಮೊದಲು ಇನ್‌ಫ್ರಾಸ್ಟ್ರಕ್ಚರ್ ಸೆಸ್ ಹಾಕಿದರು. ಈ ಸೆಸ್‌ನಲ್ಲಿ ಎರಡು ಭಾಗ ಇದೆ. ಮೋಟಾರ್ ವಹಿಕಲ್ಸ್‌ಗೂ ಇದೆ, ಸ್ಟಾಂಪ್ ಡ್ಯೂಟಿ ಮೇಲೂ ಇದೆ. ಎರಡೂ ಸೇರಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದಲ್ಲಿ ಮಂಡನೆ ಮಾಡಿದಂತಹ ಕಾನ್‌ಸೆಕ್ವೆನ್ಸಿಯಲ್ ಬಿಲ್ ಅಷ್ಟೇ. ಈಗ ಅದನ್ನು ಏನು ಮಾಡುತ್ತಿದ್ದೇವೆ ಎಂದರೆ ಅದರಲ್ಲಿ ಬರತಕ್ಕ ಒಟ್ಟು ಸೇಲ್ಸ್ ಟ್ಯಾಕ್ಸನ್ನು ಹೊರತುಪಡಿಸಿ, ಒಟ್ಟು ಬರತಕ್ಕಂಥ ಆದಾಯ ಸುಮಾರು 143 ಕೋಟಿ ರೂಪಾಯಿಗಳು ಅದು ಈಗಲೂ ಬರುತ್ತಿದೆ. ಅದನ್ನು ಮೊದಲು ಮಿತಿಗೊಳಿಸಿದ್ದರು. "State revenues for transfer of infrastructure initiative fund.' Out of the accurued fund, 1/3 would continued to be earmarked for the BMRT and the remaining 2/3 would be used for the various infrastructure projects across the state. This is all the amendment we are bringing.

ಸೀಮಿತವಾಗಿ ಮೊದಲು ಅದನ್ನು ಬಿಎಂಆರ್‌ಟಿಎಲ್‌ಗೆ ಮಾತ್ರ ಬಳಕೆ ಮಾಡಿಕೊಳ್ಳುತ್ತಿದ್ದರು. ಈಗ ಅದನ್ನು ರಾಜ್ಯಕ್ಕೆ ವಿಸ್ತರಣೆ ಮಾಡಬೇಕು ಎನ್ನತಕ್ಕದ್ದು ಎಂದು This is a consequential ..... can be passed.

ಶ್ರೀ ಎ. ರಾಮದಾಸ್(ಕೃಷ್ಣರಾಜ) :- ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಇನ್ ಫ್ರಾಸ್ಟ್ರಕ್ಚರ್ ಸೆಸ್ ಬಗ್ಗೆ ತಾವು ಬಹಳ ಮುಖ್ಯವಾದ ವಿಚಾರವನ್ನು ಇಲ್ಲಿ

ಇಟ್ಟಿದ್ದೀರಿ, ಇದರ ಜೊತೆಯಲ್ಲಿ ಹೇಗೆ ನಗರಪ್ರದೇಶಗಳಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ನಮ್ಮ ಮುಂದೆ ಕಳೆದ ಬಾರಿ ವಿಧಾನ ಸಭೆಯ ಅಧಿವೇಶನದಲ್ಲಿ ಬಂದ ರೀತಿಯಲ್ಲಿ ನಗರ ಪ್ರದೇಶಗಳ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ 2001ನಲ್ಲಿ ಏನು ಬಂದಿದೆ. ಅಲ್ಲೂ ಕೂಡ ತಾವು ನಗರಪ್ರದೇಶಗಳಲ್ಲಿ ಬರುವಂತಹ ವಾಹನಗಳ ಮೇಲೆ ತೆರಿಗೆಯನ್ನು ಹಾಕುವಂತಹ ಕೆಲಸವನ್ನು ಮಾಡಿದ್ದೀರಿ. ಅಂದರೆ ಒಂದು ವಾಹನದ ಮೇಲೆ 1957ರ ಕರ್ನಾಟಕ ಮೋಟಾರ್ ವೆಹಿಕಲ್ಸ್ ಆಕ್ಟ್‌ನ ಅಡಿಯಲ್ಲಿ ಬರುವಂತಹ ಒಂದು ವಾಹನದ ತೆರಿಗೆಯನ್ನು ಈ ಒಂದು ಇಲಾಖೆಗೆ ಕಟ್ಟುವುದಲ್ಲದೇ ಆಯಾಯಾ ಲೋಕಲ್ ಬಾಡಿಗಳಿಗೆ 500 ರೂ.ಗಳನ್ನು ಆಯಾಯ ಪ್ರದೇಶದಲ್ಲಿ ಕಟ್ಟಬೇಕು ಎನ್ನುವ ವಿಚಾರವನ್ನು ಹಾಕಿದ್ದೀರಿ. ಅದನ್ನು ವಿವರಣೆ ಮಾಡತಕ್ಕ ವಿಚಾರದಲ್ಲಿ ಒಂದು ಸಭೆಯನ್ನು ಕರೆಯಲಾಗಿತ್ತು.

ನೀವು ಡಬಲ್ ಟ್ಯಾಕ್ಸೇಷನ್ ಸಿಸ್ಟಂ ತರಲು ಸಾಧ್ಯ ಇಲ್ಲ. ತಾವು ಕಾನೂನು ಮಂತ್ರಿಗಳು ತಮಗೆ ಗೊತ್ತಿದೆ, ಸುಪ್ರೀಂ ಕೋರ್ಟಿನಲ್ಲಿ ಎರಡು ಮೂರು ಜಡ್ಜ್‌ಮೆಂಟ್‌ಗಳೂ ಕೂಡ ಆಗಿವೆ. ಡಬಲ್ ಟ್ಯಾಕೇಷನ್ ಸಿಸ್ಟಂ ಯಾವುದೇ ಕಾರಣಕ್ಕೂ ಆಗುವುದಕ್ಕೆ ಸಾಧ್ಯ ಇಲ್ಲ. ಒಂದು ಕಡೆ ವಾಹನದ ಮೇಲೆ ಇರುವಂತಹದಕ್ಕೆ ತಾವು ಈ ಆಕ್ಟ್‌ನಲ್ಲೂ ಕೂಡ ತೆರಿಗೆ ಹಾಕುತ್ತಿದ್ದೀರಿ, ಅದರ ಜೊತೆಗೆ ಹೊಸದಾಗಿ ಬಂದಿರುವಂತಹ ಅರ್ಬನ್ ಡೆರಲಪ್‌ಮೆಂಟ್ ಆಕ್ಟ್‌ನ ಅಡಿಯಲ್ಲೂ ಕೂಡ 500 ರೂಪಾಯಿಗಳ ಎಕ್ಸ್‌ಟ್ರಾ ಮೊತ್ತ ಹಾಕುವಂತಹ ವ್ಯವಸ್ಥೆಗಳು ಆಗಿವೆ. ಇದು ಆಗಬಾರದು ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆ. ಆಗ ಆ ವಿಚಾರವನ್ನು ಹೇಳುವಂತಹ ಸಂದರ್ಭದಲ್ಲಿ ಹೇಳಿದರು. ನಗರ ಪ್ರದೇಶದಲ್ಲಿ ಬರುತ್ತಿರುವಂತಹ ಪೊಲ್ಯೂಷನ್ ಅನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರವಾಗಿ ಮತ್ತು ಇನ್‌ಫ್ರಾಸ್ಟ್ರಕ್ಚರ್‌ನ ಡೆವಲಪ್‌ಮೆಂಟ್‌ಗೋಸ್ಕರವಾಗಿ ಈ ಒಂದು ವಾಹನದ ಮೇಲೆ 500 ರೂಪಾಯಿ ತೆರಿಗೆ ಹಾಕುತ್ತಿದ್ದೇವೆ ಎನ್ನುವಂತಹ ವಿಚಾರವನ್ನು ಸಂಬಂಧಪಟ್ಟಂತಹ ಅಧಿಕಾರಿಗಳು ಮತ್ತು ಮಂತ್ರಿಗಳು ಹೇಳಿದರು. ಇಲ್ಲಿ ಅದರ ಜೊತೆಯಲ್ಲಿ ತಾವು ಈಗಾಗಲೇ ಗ್ರೀನ್ ಟ್ಯಾಕ್ಸನ್ನು ಹಾಕಿದ್ದೀರಿ. ಕಳೆದ ವರ್ಷದಿಂದ ಅಂದರೆ 1.4.2002ರಿಂದ ಈಗಾಗಲೇ ವಾಹನಗಳ ವಯಸ್ಸಿನ ಆಧಾರದ ಮೇಲೆ ನೀವು ಗ್ರೀನ್ ಟ್ಯಾಕ್ಸನ್ನು ಹಾಕುತ್ತಿದ್ದೀರಿ. ಒಂದು ಕಡೆ ಗ್ರೀನ್ ಟ್ಯಾಕ್ಸನ್ನು ಹಾಕಿ ಪೊಲ್ಯೂಷನ್ ಅನ್ನು ಅವಾಯ್ಡ್ ಮಾಡಲಿಕ್ಕೋಸ್ಕರ ಖರ್ಚು ಮಾಡುತ್ತೇವೆ ಎಂದು ಇಲ್ಲಿ ಹೇಳುತ್ತಿದ್ದೀರಿ, ಇನ್ನೊಂದು ಕಡೆಗೆ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಟ್ಯಾಕ್ಸೇಷನ್ ಹಾಕುತ್ತಿದ್ದೀರಿ. ಇದನ್ನು ತಾವು ದಯಮಾಡಿ ಕ್ಲಾರಿಫೈ ಮಾಡಬೇಕು. ಡಬಲ್ ಟ್ಯಾಕ್ಸೇಷನ್‌ಗೆ ಹೇಗೆ ಅವಕಾಶ ಇದೆ? ಒಂದು ಪ್ರಾವಿಜನ್ ಇದೆ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ This is only a cess on the excise duty meant for a particular purpose. The purpose is, ಮೂಲಭೂತ ಸೌಕರ್ಯಗಳನ್ನು ನಗರಪ್ರದೇಶದಲ್ಲಿ ಕೊಡುವುದಕ್ಕಾಗಿ ವಿಶೇಷವಾದಂತಹ ತೆರಿಗೆ. cess on the excise duty ಇದುವರೆಗೂ ಏನು ಇತ್ತು, ಅದು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿತ್ತು. ಅದನ್ನು ಈಗ ವಿಸ್ತರಿಸುತ್ತಿದ್ದೇವೆ. ನೀವು ಹೇಳುವ ಪ್ರಶ್ನೆಗೂ ಇದಕ್ಕೂ ಯಾವುದೇ ಅರ್ಥದ ಸಂಬಂಧ ಇಲ್ಲ. ಆದರೆ I will keep this in mind ಹಳೆಯ ಬಿಲ್ಲನ್ನು ಎಕ್ಸ್ ಟೆಂಡ್

ಮಾಡಿದ್ದೇವೆ. This is going on from 1998. ಈ ತೆರಿಗೆ ಮುಂದುವರಿಸಬೇಕೇ ಬೇಡವೇ ಎನ್ನುವ ಪ್ರಶ್ನೆ ಇದೆ. ಇದನ್ನು ಮುಂದುವರಿಸಬೇಕು, ಬೆಂಗಳೂರು ನಗರಕ್ಕೆ ಸೀಮಿತವಾಗಿ ಅಲ್ಲ. to be extended to the whole of the state ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :- ನೀವು ಹೇಳತಕ್ಕದ್ದನ್ನು ನಾವು ಒಪ್ಪಿಕೊಳ್ಳುತ್ತೇನೆ. ಈಗ ನೀವೇನು ಅಮೆಂಡ್‌ಮೆಂಟನ್ನು ತೆಗೆದುಕೊಂಡು ಬಂದಿದ್ದೀರಿ, ಈ ಸೆಸ್ ಅನ್ನು ನನಗೆ ಗೊತ್ತಿರುವ ಹಾಗೆ ಮಾಸ್ ಟ್ರಾನ್ಸ್‌ಪೋರ್ಟ್ ಸಿಸ್ಟಂಗೋಸ್ಕಾರವಾಗಿ ಕಲೆಕ್ಟ್ ಮಾಡಿದ್ದು Nearly Rs. 200 crore to Rs. 300 crore of money is already there.

ಈ ದುಡ್ಡನ್ನು ಬೆಂಗಳೂರು ಸಿಟಿಯವರು ಕೊಡತಕ್ಕದ್ದು. ಅದನ್ನು ಬೆಂಗಳೂರು ಸಿಟಿಯಲ್ಲಿರತಕ್ಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ಉಪಯೋಗಿಸಿಕೊಳ್ಳುವುದನ್ನು you are extending it to the State. ಹಾಗಾದರೆ ನೀವು ಈ ಸೆಸ್‌ಗಳನ್ನು ಬೇರೆ ಕಡೆಗಳಿಂದಲೂ ಕಲೆಕ್ಟ್ ಮಾಡುತ್ತಿದ್ದೀರಾ? ಅದಕ್ಕೆ ಏನೂ ನೀವು ಪ್ರಾವಿಜನ್ ಇಟ್ಟುಕೊಂಡಿಲ್ಲ. ಈಗ ನೀವು ಏನು ಹೇಳಿದ್ದೀರಿ ಎಂದರೆ ಈಗೇನು ದುಡ್ಡು 1998 ನಿಂದ 2004ರವರೆಗೂ ಈ ಸೆಸ್ ಅನ್ನು ಲೆವಿ ಮಾಡಬಹುದು. 5% or 2% or some such thing has been fixed and there is already about Rs. 200 crore to Rs. 300 crores which was collected. ಇದನ್ನು ನಾವು ಜನಗಳಿಗೆ ತೆರಿಗೆ ಹಾಕತಕ್ಕ ಸಂದರ್ಭದಲ್ಲಿ ನಾವು ಇದನ್ನು ಬೆಂಗಳೂರಿನಲ್ಲಿರತಕ್ಕಂಥ ಇನ್ ಫ್ರಾಸ್ಟ್ರಕ್ಚರ್‌ಗೆ ಉಪಯೋಗಿಸುತ್ತೇವೆಂದು ಹೇಳುತ್ತಿರತಕ್ಕದ್ದು. ಯಾವ ಪರ್ಪಸ್‌ಗೋಸ್ಕರ ಇದನ್ನು ನೀವು ತಂದಿದ್ದೀರಾ ಎಂಬುದು ಜನಗಳಿಗೆ ಗೊತ್ತಾಗಬೇಕು. ನೀವು ಇನ್ ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟನ್ನು ಬೇರೆ ಕಡೆಗೆ ಉಪಯೋಗಿಸುತ್ತೇವೆ ಎಂದರೆ for what purpose you are deviating this fund? This is basically to deviate the funds you have collected from everybody.

ಶ್ರೀ ಡಿ.ಬಿ. ಚಂದ್ರೇಗೌಡ :- ನಾವು ಹೊಸ ತೆರಿಗೆನ್ನು ಏನೂ ಹಾಕುತ್ತಿಲ್ಲ. ಈಗ ಹಾಕಿರತಕ್ಕಂಥ ತೆರಿಗೆ ಬಂಗಳೂರು ನಗರದ ವಾಹನಗಳಿಗೆ ಸೀಮಿತವಾಗಿ ಏನೂ ಇಲ್ಲ. ಏಕ್ಸೈಜ್ ಡ್ಯೂಟಿಯಲ್ಲಿ ನಾವೇನು 3 ಪರ್ಸೆಂಟ್ ಎಕ್ಸ್‌ಟ್ರಾ ವಸೂಲು ಮಾಡುತ್ತಿದ್ದೇವೆ. ಅದು ಬೆಂಗಳೂರು ನಗರಕ್ಕೆ ಅಷ್ಟೇ ಸೀಮಿತವಾಗಿದೆ. ಅದನ್ನು ಉಳಿಕೆ ನಗರಗಳಿಗೆ ವಿಸ್ತರಿಸುತ್ತಾ ಇದ್ದೇವೆ ಅಷ್ಟೇ, ಯಾವುದಕ್ಕೆ ಅಂದರೆ ಖರ್ಚು ಮಾಡುವುದಕ್ಕೆ ಈ ಸೆಸ್ ಆನ್ ಎಕ್ಸೈಜ್ ಡ್ಯೂಟಿ ಇದೆಯಲ್ಲಾ ಅದನ್ನು ಈ ಎಲ್ಲಾ ಕಡೆ not being levied ಅದನ್ನು throughout the State, ವಿಸ್ತರಿಸುತ್ತಿದ್ದೇವೆ. ಶ್ರೀ ಮಾನ್ ಸಿಂಧ್ಯಾ ಅವರ ಪ್ರಶ್ನೆಯಿದೆಯಲ್ಲಾ ಆ ಪ್ರಕಾರ ರಾಜ್ಯ ವ್ಯಾಪ್ತಿಯಾಗಿ ನಾವು ಎಕ್ಸೈಜ್ ಡ್ಯೂಟಿಯನ್ನು ಹಾಕಿಲ್ಲ. ನೀವು ಹೇಳಿದ ಹಾಗೆ ಈ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿ ಈ ತೆರಿಗೆ ಇಲ್ಲ ಆದರೆ ಈ ತೆರಿಗೆಯನ್ನು ಖರ್ಚು ಮಾಡಬಾರದು. ನಗರಗಳ ಮೂಲಭೂತ ಸೌಕರ್ಯಕ್ಕೆ ಎಲ್ಲಾ ಕಡೆಗೆ ಖರ್ಚು ಮಾಡತಕ್ಕ ವ್ಯವಸ್ಥೆಯನ್ನು ಜಾರಿಗೆ ಕೊಟ್ಟಿದ್ದೇವೆ. ಹೊಸ ತೆರಿಗೆ ಅಲ್ಲ. ಮಾನ್ಯ ರಾಮದಾಸ್ ಅವರು ಹೇಳಿದ ಹಾಗೆ ತೆರಿಗೆ ಹೊಸದಲ್ಲ. ತಾವೇ ಹೇಳಿದ ಹಾಗೆ 1998 ರಿಂದ ಇದ್ದ ತೆರಿಗೆ. ಅಲ್ಲಿ ಬರತಕ್ಕಂಥ ಹಣವನ್ನು ಖರ್ಚು ಮಾಡತಕ್ಕಂಥ ಅಧಿಕಾರ ಬೆಂಗಳೂರು ನಗರಕ್ಕೆ ಅಷ್ಟೇ ಸೀಮಿತವಾಗಿತ್ತು. ಇದನ್ನು ರಾಜ್ಯದ ಎಲ್ಲಾ ನಗರಗಳಿಗೂ ವಿಸ್ತರಿಸುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- 1998ರಲ್ಲಿ ಈ ಸೆಸ್ ಅನ್ನು ಹಾಕಿದಂತಹ ಸನ್ನಿವೇಶದಲ್ಲಿ ನಾವು ಜನಗಳಿಗೆ ಹೇಳಿದ್ದು ಅಂದರೆ ಬೆಂಗಳೂರಿನಲ್ಲಿರತಕ್ಕ ಇನ್ ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡುವುದಕ್ಕೋಸ್ಕರ ಸೆಸ್ ಎಂದು ನೀವು ತೆರಿಗೆಯನ್ನು ವಸೂಲು ಮಾಡಿಕೊಂಡಿರತಕ್ಕದ್ದು.

ಶ್ರೀ ಡಿ.ಬಿ. ಚಂದ್ರೇಗೌಡ :- ನಾನು ಪೂರ್ತಿಯಾಗಿ ಹೇಳಲಿಲ್ಲ. ಈಗ ತಾವು ಹೇಳಿದ್ದೀರಲ್ಲಾ. ಒಂದು ಕಾಲಕ್ಕೆ ತೆರಿಗೆಯನ್ನು ಬೆಂಗಳೂರು ನಗರಕ್ಕೆ ಸೀಮಿತ ಮಾಡಿ ಖರ್ಚು ಮಾಡುತ್ತಿದ್ದೇವು; ಲೆವಿ ಮಾಡುತ್ತಿದ್ದವು. ಈಗ ಇಡೀ ರಾಜ್ಯವ್ಯಾಪ್ತಿಯಾಗಿ ಲೆವಿ ಮಾಡುತ್ತೇವೆ ಮತ್ತು ರಾಜ್ಯ ವ್ಯಾಪ್ತಿಯಾಗಿ ಖರ್ಚು ಮಾಡತ್ತೇವೆ. ಈಗ ಮಾನ್ಯ ರಾಮದಾಸ್ ಅವರೇ, ಡಬಲ್ ಟ್ಯಾಕ್ಸೇಷನ್ ಬಗ್ಗೆ ಕಾನ್ಸ್ಟಿಟ್ಯೂಷನಲ್ ಬಾರ್ ಏನೂ ಇಲ್ಲ. This taxation which was levied four years ago, it is only being extended throughout the State.

ಶ್ರೀ ಎ. ರಾಮದಾಸ್ :- ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದನ್ನು ನಾನು ಹೇಳುತ್ತಿಲ್ಲ. ಇಲ್ಲಿ ಪ್ರಶ್ನೆ ಏಕೆ ಕೇಳುತ್ತಿದ್ದೇನೆಂದರೆ ತಾವೇನು ಇಲ್ಲಿ ಸೆಸ್ ಎಂದು ಹಾಕಿದ್ದೀರಿ, ಸೆಸ್ ಎಂದು ಒಂದು ಸಲ ಯಾವುದರ ಮೇಲೆ ಹಾಕಿದರೂ ಕೂಡ ಯಾರ ಪರ್ಪಸ್‌ಗೋಸ್ಕರ ಸೆಸ್ ಅನ್ನು ಹಾಕಿದ್ದೀರಿ, ಆ ಪರ್ಪಸ್ ಬಿಟ್ಟು ಡೀವಿಯೇಟ್ ಮಾಡಬಾರದು ಎನ್ನುವಂತಹ ವಿಚಾರ ಇದೆ. ಅದಕ್ಕೋಸ್ಕರ ಈ ಆಕ್ಟನ್ನು ತಂದಿದ್ದೀರಿ. ಇಲ್ಲಿ ಪಾಸ್ ಮಾಡಿಕೊಟ್ಟರೆ ಬೇರೆ ಕಡೆಗೆ ಕೂಡ ಖರ್ಚು ಮಾಡುವುದಕ್ಕೆ ನಿಮಗೆ ಪ್ರಾವಿಜನ್ ಸಿಗುತ್ತದೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ತಾವು ಇಲ್ಲಿ ಏನು ಹೇಳುತ್ತಿದ್ದೀರಿ. ಇದೇ ರೀತಿಯಲ್ಲಿ ಪ್ರತಿ ಒಂದು ನಗರಪ್ರದೇಶಗಳಲ್ಲಿರುವಂತಹ ಮುನಿಸಿಪಾಲಿಟಿ ಮತ್ತು ಕಾರ್ಪೋರೇಷನ್‌ನಲ್ಲೂ ಕೂಡ ಇಂತಹದೇ ಒಂದು ಸೆಸ್ ಅನ್ನು ಹಾಕಲು ನೀವು ಪ್ರಾವಿಜನ್ ಮಾಡಿಕೊಂಡಿರುವುದರಿಂದ ಆಯಾಯ ಪ್ರದೇಶದಲ್ಲಿ ಹಣವನ್ನು ಕಲೆಕ್ಟ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಈ ಹಣವನ್ನು ಅಲ್ಲಿ ಖರ್ಚು ಮಾಡುತ್ತಿರುವುದರಿಂದ ಆ ಸೆಸ್ ಅನ್ನು ಕಲೆಕ್ಟ್ ಮಾಡುವುದನ್ನು ಸರ್ಕಾರ ಡ್ರಾಪ್ ಮಾಡುತ್ತಿದೆಯಾ ಎಂದು ನನಗೆ ಬೇಕಾಗಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ :- ಡಬಲ್ ಟ್ಯಾಕ್ಸೇಷನ್‌ಗೆ ಕಾನ್ಸ್ಟಿಟ್ಯೂಷನಲ್ ಬಾರ್ ಏನೂ ಇಲ್ಲವಲ್ಲಾ? ಈಗ ಬೆಂಗಳೂರು ನಗರ ಒಂದು ಮುಖ್ಯವಾಗಿ ಇಂಪ್ರೂವ್ ಆದರೆ ಸಾಲದು; ಇದರ ಹಾಗೆಯೇ ಮೈಸೂರು ನಗರರೂ ಆಗಬೇಕು. ಅದು ಆಗಬೇಕು ಎಂದರೆ ಎಕ್ಸ್‌ಟ್ರಾ ಈ ಎಕ್ಸೈಜ್ ಡ್ಯೂಟಿ 3 ಪರ್ಸೆಂಟ್ ಎಂದು ಏನು ಇತ್ತು that is also being extended and the expenditure also is being extended for the development of other towns also.

ಶ್ರೀ ಎ. ರಾಮದಾಸ್ :- ನೀವು ಸೆಸ್ ಅನ್ನೂ ಅಲ್ಲಿ ಕಲೆಕ್ಷನ್ ಮಾಡುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಹೌದು.

ಶ್ರೀ ಎ. ರಾಮದಾಸ್ :- ಅದನ್ನೇ ನಾನು ಹೇಳುತ್ತಿರುವುದು. ನೇರವಾಗಿ ಹೇಳುತ್ತೇನೆ. ಕೇವಲ ಈಗ ಮಾಡಿರುವ ಕಲೆಕ್ಷನ್ ಅನ್ನು ಖರ್ಚು ಮಾಡುವ ಒಂದು ಭಾಗ ಅಲ್ಲ. ಬೆಂಗಳೂರು ಮಹಾ ನಗರದಲ್ಲಿದ್ದಂತಹ ಸೆಸ್ ಕಲೆಕ್ಷನ್ಸ್ ಏನು ಇದೆ ಅದನ್ನು ಬೇರೆ ಬೇರೆ ಪ್ರದೇಶಗಳಿಗೂ ಎಕ್ಸ್‌ಟೆಂಡ್ ಮಾಡುವಂತಹದು ಆಗುತ್ತಿದೇ ಎಂದು ಅವರು ಹೇಳುತ್ತಿರುವುದು. ಅಂದರೆ

ಕೇವಲ ಈಗ ಕಲೆಕ್ಟ್ ಮಾಡಿರುವುದನ್ನು ಎಕ್ಸ್‌ಪೆಂಡಿಚರ್ ಮಾಡುವುದು ಅಲ್ಲ. ಮುಂದೆ ಕೂಡ ಈ ಆಕ್ಟ್ ಬಂದ ನಂತರದಲ್ಲಿ ಆಪ್ರದೇಶದಲ್ಲೂ ಕೂಡ, ಅಲ್ಲೂ ಕೂಡ ಇನ್ ಫ್ರಾಸ್ಟ್ರಕ್ಚರ್ ಸೆಸ್ ಅನ್ನು ಆ ಪ್ರದೇಶದಲ್ಲಿ ಮಾರಾಟ ಆಗುರಂತಹ ಆ ಒಂದು ಎಕ್ಸೈಜ್ ಡ್ಯೂಟಿ ಮೇಲೆ ತಾವು ಹಾಕುತ್ತೀರಿ. ಅದನ್ನೇ ಅವರು ಹೇಳುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ :- ಬಜೆಟ್ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಸಲಹೆ ಮಾಡಿದ್ದರು ಅದನ್ನು ತಾವು ಮಂಜೂರು ಮಾಡಿದ್ದೀರಿ. ಕಾನ್‌ಸಿಕ್ವೆನ್‌ಷಿಯಲ್ ಆಗಿ ಬಿಲ್ಲನ್ನು ತಂದಿದ್ದೇವೆ. ಹೊಸದಾಗಿ ಏನೂ ತೆರಿಗೆ ಹಾಕತಕ್ಕದ್ದು ಇವತ್ತಿನ ಪ್ರಪೋಸಲ್ ಅಲ್ಲ. ಹಣಕಾಸಿನ ಮಂತ್ರಿಗಳು ಆಯವ್ಯಯ ಮಂಡನೆಯಲ್ಲಿ ಏನನ್ನು ಹಾಕಿದ್ದರು. ಅದನ್ನೇ ನಾವು ಶಾಸನ ರೂಪದಲ್ಲಿ ತರುತ್ತಿದ್ದೇವೆ. It has to be modified as a law. The statement made by the Finance Minister for levying any tax or otherwise should come in the form of a legislation Therefore we have brought the Legislation. It is only consequential.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೆ, ಎಷ್ಟು ಹಣ ಈ ಸೆಸ್ ಮುಖಾಂತರ ಕಲೆಕ್ಟ್ ಆಗಿದೆ? ಯಾವ ಪರ್ಪಸ್‌ಗೋಸ್ಕರ ಈ ಸೆಸ್ ಅನ್ನು ಕಲೆಕ್ಟ್ ಮಾಡಿದ್ದೀರಿ, ಆ ಪರ್ಪಸ್‌ಗೇ ಅದು ಖರ್ಚಾಗಿದೆಯೆ? ಅದನ್ನು ಈ ಸದನಕ್ಕೆ ಹೇಳಬೇಕಾಗುತ್ತದೆ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಗೋಸ್ಕರ ಎಂದು ಮಾನ್ಯ ಸಿಂಧ್ಯಾ ಅವರು ಹೇಳಿದರು. ಇಎಲ್‌ಆರ್ ಪಿಎಸ್‌ಗೆ ಎಂದು ಹೇಳಿದರು. ಅದನ್ನು ಕಲೆಕ್ಟ್ ಮಾಡಿರುವಂತಹದು ಅಥವಾ ಮಾಸ್ ರ‍್ಯಾಪಿಡ್ ಟ್ರಾನ್ಸ್‌ಪೋರ್ಟೇಷನ್ ಸಿಸ್ಟಂಗೆ ಕಲೆಕ್ಟ್ ಮಾಡಿರುವಂತಹದು. ಅದಕ್ಕೋಸ್ಕರವೇ ಖರ್ಚಾಗಿದೆಯಾ ಅಥವಾ ಇದನ್ನು ಡೀವಿಯೇಟ್ ಮಾಡಿ ಬೇರೆ ಯಾವುದಕ್ಕಾದರೂ ಖರ್ಚಾಗಿದೆಯಾ? ಏಕೆಂದರೆ ಯಾವ ಪರ್ಪಸ್‌ಗೆ ಎಂದು ಕಲಕ್ಟ್ ಮಾಡಿ ಡೀವಿಯೇಟ್ ಮಾಡುವುದಾದರೆ ಪುನಃ ಇದಕ್ಕೆ ನಾವು ಅವಕಾಶವನ್ನು ಕೊಡುವುದು ಸದರಿ ತೋರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :- ಆ ಡೀಟೆಲ್ಸ್ ನನ್ನ ಹತ್ತಿರ ಇಲ್ಲ, ತರಿಸಿಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಚಂದ್ರೇಗೌಡರು ದಯಮಾಡಿ ಕೇಳಬೇಕು. ಈಗ ನಮಗೆ ಗೊತ್ತಾಗದೇ ಹೋದರೂ ರಾಜ್ಯದ ಜನತೆಗೆ ಇದು ಗೊತ್ತಾಗಬೇಕಲ್ಲಾ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾನು ಕೇಳತಕ್ಕಂಥದ್ದು. ಈಗ ನೀವು ಇದು ಕಾನ್‌ಸಿಕ್ವೆನ್ಸಿಯಲ್ ಬಿಲ್ ಎಂದು ಹೇಳಿದಿರಿ, ಅದು ನಮಗೆ ಗೊತ್ತಿದೆ. ಜೊತೆಗೆ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಮೆನ್‌ಷನ್ ಮಾಡಿರುವುದು ಎನ್ನುವುದೂ ಗೊತ್ತಿದೆ. ಈಗ ಬೆಂಗಳೂರು ಸಿಟಿಗೆ ಕಲೆಕ್ಟ್ ಮಾಡಿರತಕ್ಕಂಥ ಸೆಸ್ ಅನ್ನು ನೀವು ಬೇರೆ ಕಡೆಗೆ ಲೆವಿ ಮಾಡುತ್ತೇವೆಂದು ಹೇಳಿಲ್ಲ. ಕನ್ನಡದಲ್ಲಿ ಇರತಕ್ಕದ್ದನ್ನು ತಾವು ಓದಿ, ಬಹಳ ಸರಿಯಾಗಿದೆ. 1957ರ ತಿದ್ದುಪಡಿ ನೋಡಿ.

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 30), ಪೇಜ್ ನಂಬರ್ 2ರಲ್ಲಿ ಈ ರೀತಿ ಇದೆ.

> " ಮೂಲ ಸೌಲಭ್ಯ ಅಭಿವೃದ್ಧಿ ನಿಗಮ (ಕರ್ನಾಟಕ) ನಿಯಮಿತ ಮತ್ತು ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತದಲ್ಲಿ ಇಕ್ವಿಟಿ ಹೂಡಿಕೆಯ ಉದ್ದೇಶಕ್ಕಾಗಿ" ಎಂಬ ಪದಗಳಿಗೆ ಬದಲಾಗಿ" "ರಾಜ್ಯಾದ್ಯಂತ ಇರುವ ವಿವಿಧ ಮೂಲ

ಸೌಲಭ್ಯ ಯೋಜನೆಗಳ ಉದ್ದೇಶಕ್ಕಾಗಿ ಮತ್ತು ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತದಲ್ಲಿ ಸಾಮಾನ್ಯ ಇಕ್ವಿಟಿ ಹೂಡಿಕೆಯ ಉದ್ದೇಶಕ್ಕಾಗಿ" ಎಂಬ ಪದಗಳನ್ನು ಪ್ರಯೋಜಿಸತಕ್ಕದು.

ಅಂದರೆ ಇದುವರೆಗೂ ಅದು ಇದ್ದಿದ್ದು, ಬೆಂಗಳೂರು ಸಮೂಹ ತ್ವರಿತ ಸಾರಿಗೆ ನಿಯಮಿತದಲ್ಲಿ ಮಾತ್ರ. ಈಗ ಅದನ್ನು ತಾವು ಏನು ಮಾಡುತ್ತಿದ್ದೀರಿ ಎಂದರೆ, ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡುತ್ತಿದ್ದೀರಿ. ನಮಗೆ ಏನು ಬೇಕು ಎಂದರೆ, ಇದುವರೆಗೂ ಎಷ್ಟು ಕಲೆಕ್ಟ್ ಆಗಿದೆ? ನಾನು ಅದನ್ನು ಸ್ಪೆಸಿಫಿಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾಗಲೂ ಸಹಾ ಕೇಳಿದ್ದೆ. ಈಗ ಇ.ಎಲ್.ಆರ್.ಟಿ.ಎಸ್. ಯನ್ನು ನೀವು ಕೈ ಬಿಟ್ಟಿದ್ದೀರಿ. ಈಗ ಬೇರೆ ಯಾರಿಗೋ ಕೊಡುತ್ತೇವೆ ಎಂದ್ಹೇಳಿ ಪ್ರಚಾರ ಪಡೆದುಕೊಂಡಿದ್ದೀರಿ. ನೀವು ಕೊಡುವುದೂ ಇಲ್ಲ, ಬಿಡುವುದೂ ಇಲ್ಲ. ನಮಗೆ ಅದೆಲ್ಲಾ ವಿಚಾರಗಳು ಗೊತ್ತು. 1998ರಲ್ಲಿ ನಾವು ಇ.ಎಲ್.ಆರ್.ಟಿ.ಎಸ್. ಯನ್ನು ತರಬೇಕೆನ್ನುವ ಉದ್ದೇಶದಿಂದಾಗಿ ಸೆಸ್ ಅನ್ನು ಕಲೆಕ್ಟ್ ಮಾಡಿದೆವು. This is not for utilising for some other purposes. ಈಗ ನಿಮ್ಮ ಹತ್ತಿರ ದುಡ್ಡು ಇಲ್ಲದೇ ಇರುವುದರಿಂದಾಗಿ, ಬೇರೆ ಕಡೆಗೆ ಇನ್‌ಫ್ರಾಸ್ಟ್ರಕ್ಚರ್‌ಗೆ ನೀವು ಸಾಲ ತೆಗೆದುಕೊಳ್ಳಬೇಕಾದರೆ, ಅದು ವರ್ಲ್ಡ್ ಬ್ಯಾಂಕ್ ಆಗಿರಬಹುದು, ಎ.ಡಿ.ಬಿ. ಆಗಿರಬಹುದು, ಬೇರೆ ಸಂಸ್ಥೆಗಳು ಆಗಿರಬಹುದು, ಸ್ಟೇಟ್ ಗೌರ್ನಮೆಂಟ್ ಇನ್‌ವೆಸ್ಟ್ ಮಾಡಬೇಕಾಗುತ್ತದೆ. ನಿಮ್ಮ ಬಡಾಯಿ ಬಂಡವಾಳ ಇಲ್ಲದೇ ಇರತಕ್ಕದ್ದು. ಅದರಿಂದಾಗಿ ನೀವೇನು ಮಾಡುತ್ತಿದ್ದೀರಿ ಎಂದರೆ, ಇಲ್ಲಿಯವರೆಗೂ 250-300 ಕೋಟಿ ರೂಪಾಯಿಗಳ ದುಡ್ಡು ಇರುವುದರಿಂದ, ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿರತಕ್ಕಂಥ ನಾಜೂಕಿನ ಕೆಲಸ ಇದು. ಆದ್ದರಿಂದ ನಾನು ಅತ್ಯಂತ ವಿನಯದಿಂದ ಮಾನ್ಯ ಮಂತ್ರಿಗಳಲ್ಲಿ ಕೇಳತಕ್ಕದ್ದು, ಅದಕ್ಕೋಸ್ಕರ ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಇದ್ದಿದ್ದರೆ ಇವೆಲ್ಲಾ ನಮಗೆ ಕರೆಕ್ಟಾಗಿ ಗೊತ್ತಾಗಿರುತ್ತಿತ್ತು. ಎಷ್ಟು ದುಡ್ಡು ಕಲೆಕ್ಟ್ ಆಗಿದೆ? ಸೆಸ್ ರೂಪದಲ್ಲಿ ಎಷ್ಟು ಕಲೆಕ್ಟ್ ಮಾಡಿ ಇಟ್ಟುಕೊಂಡಿದ್ದೀರಿ? ಯಾವ ಬ್ಯಾಂಕಿನಲ್ಲಿ ಇಟ್ಟಿದ್ದೀರಾ? ಪ್ರೈವೇಟ್ ಬ್ಯಾಂಕಿನಲ್ಲಿ ಇಟ್ಟಿದ್ದೀರಾ ಅಥವಾ ಇನ್ನಾವುದಕ್ಕಾದರೂ ಇನ್‌ವೆಸ್ಟ್ ಮಾಡಿದ್ದೀರಾ? ಹಾಗಾದರೆ ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ಮುಗಿದು ಹೋಯಿತೋ? ಆ mass rapid transport programme ಮುಗಿದು ಹೋಯಿತೋ? ಯಾರೋ ಯು.ಬಿ.ನವರು ಅದನ್ನು ಮಾಡುತ್ತೇವೆ ಎಂದೇಳಿ ಬಂದಿದ್ದರು. ಆ ಪುಣ್ಯಾತ್ಮರು ಈಗ ಎಲ್ಲಿದ್ದಾರೆ? ಅದು ಯಾವುದೋ consortium ಮಾಡುತ್ತೇವೆ ಎಂದು ಹೇಳಿದ್ದರು. ಅದು ಮುಳುಗಿ ಹೋಯಿತೋ? ಅವೆಲ್ಲಾ ಪ್ರೊಜಕ್ಷನ್ಸ್‌ಗಳನ್ನು ಮಾಡಿ ವಿಧಾನ ಸೌಧದಲ್ಲಿ ಇದೆಲ್ಲಾ ಬಹಳ ಮೆರವಣಿಗೆಗಳು ನಮ್ಮ ಕಾಲದಲ್ಲೂ ಆಯಿತು. ಅವರೆಲ್ಲಾ ನಾಪತ್ತೆಯಾಗಿದ್ದಾರೆ. ಅವರನ್ನು ಪತ್ತೆ ಮಾಡಲಿಕ್ಕೆ ಏನಾದರೂ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? ಏನು ಆಗಿದೆ ಎಂಬುದು ನಮಗೆ ಗೊತ್ತಾಗಬೇಕಲ್ಲವೇ? ರಾಜ್ಯದ ಜನ, ಬೆಂಗಳೂರಿನ ಜನ, ಪಾಪ ಅವರು ಟ್ಯಾಕ್ಸ್ ಕಟ್ಟಿರುವವರು, ಅವರಿಗೆ ಇದರ ಬಗ್ಗೆ ಗೊತ್ತಾಗಬೇಕಲ್ಲವೇ? ಅದನ್ನೇ ನಾವು ನಿಮ್ಮ ಹತ್ತಿರ ಕೇಳುತ್ತಿದ್ದೇವೆ. What is the purpose? Now you have simply siad, ಉದ್ದೇಶಗಳು: "ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗೆಳನ್ನು ಜಾರಿಗೊಳಿಸುವುದಕ್ಕಾಗಿ....." ಸರಿ ಸ್ವಾಮಿ, ಯಾವ ಉದ್ದೇಶಕ್ಕೆ? What is your purpose? Why do you want to utilise that specific fund for that purpose? ಈಗ

ನಾವು ಹೇಳಿದ್ದೆವು. ರೇವಣ್ಣನವರು ಇವತ್ತು ಬರಲಿಲ್ಲ. ಸಿರಿಕಲ್ಚರ್ ಫಂಡ್‌ನಲ್ಲಿ 50-60 ಕೋಟಿ ರೂಪಾಯಿಗಳು ಇತ್ತು. ತಾತ್ಕಲಿಕವಾಗಿ ಕೇಂದ್ರ ಸರ್ಕಾರ ಕೊಡುವವರೆಗೂ ಸಹಿತ ರೇಷ್ಮೆ ಮಾರುಕಟ್ಟೆಯಲ್ಲಿ ಪ್ರವೇಶ ಮಾಡಿ ಎಂದು ನಾವು ಹೇಳಿದೆವು, ಅದನ್ನು ಡೀವಿಯೇಟ್ ಮಾಡುವುದಕ್ಕೆ ನಮ್ಮ ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಹೇಳಿದಿರಿ, ರೇಷ್ಮೆ ಆಕ್ಟ್‌ನಲ್ಲಿ ಅವಕಾಶ ಇಲ್ಲ, ಆ ಫಂಡನ್ನು ಹಾಗೇ ಇಟ್ಟುಕೊಂಡಿರಬೇಕು ಎಂದು ಹೇಳಿದಿರಿ. ಈ ಫಂಡ್ ಬಳಸಲೂ ಸಹಾ ನಿಮಗೆ ಅವಕಾಶ ಇರಲಿಲ್ಲ. ಈಗ ನೀವು ಅದನ್ನು ಉಪಯೋಗಿಸಿಕೊಳ್ಳುತ್ತೇವೆ ಎಂದು ಹೊರಡುತ್ತಿದ್ದೀರಿ. ಮೆಜಾರಿಟಿ ಇರುವುದರಿಂದ ಇದು ಪಾಸ್ ಆಗುತ್ತದೆ ಎನ್ನತಕ್ಕಂಥ ಕನಿಷ್ಟ ಪ್ರಜ್ಞೆ ನನಗೆ ಇದೆ ಆದರೆ What is the purose, We should like to know How much money you have collected so far? ಆ ಮೇಲೆ ಕಳುಹಿಸುತ್ತೇವೆ ಎಂದು ನೀವು ಹೇಳಿದರೆ, ನಾವು ಆಮೇಲೆಯೇ ಬಿಲ್ ಪಾಸ್ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯಾರವರ ಅಬ್ಜೆಕ್ಷನ್ಸ್ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈಗ ಸೆಸ್ ಒಂದನ್ನು ಲೆವಿ ಮಾಡಬೇಕು ಅಂತ ಹೇಳಿ ನಾವು ಆಯವ್ಯಯದಲ್ಲಿ ಏನು ಪ್ರಸ್ತಾಪವನ್ನು ಮಾಡುತ್ತೇವೆಯೋ, ಆ ಪ್ರಸ್ತಾಪಗಳನ್ನು ಶಾಸನದ ಮೂಲಕ ತರತಕ್ಕಂಥ ಒಂದು ದೊಡ್ಡ ಜವಾಬ್ದಾರಿ ಸರ್ಕಾರಕ್ಕೆ ಇದೆ. ಆ ರೂಪದಲ್ಲಿ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದೇವೆ. ಈ ಮಸೂದೆಗೆ ಸಂಬಂದಪಟ್ಟ ಹಾಗೆ, ಎಷ್ಟು ದುಡ್ಡು ವಸೂಲು ಆಗಿತ್ತು? ಯಾವ್ಯಾವ ಬಾಬಿಗೆ ಖರ್ಚಾಗಿದೆ, That's a debate. Separately we can take it up, not at this stage. This is only to the limited purpose of extending the facility provided to Bangalore Development Authority to other areas also. Confined to that, ಆಯವ್ಯಯದ ಭಾಷಣದಲ್ಲಿ ಬರತಕ್ಕಂಥ ಪ್ರತಿಯೊಂದು ಆಶ್ವಾಸನೆಗಳು ಇರಬಹುದು, ಕಡಿಮೆ ಮಾಡುವುದು ಇರಬಹುದು ಅಥವಾ ಹೆಚ್ಚಿಸುವುದು ಇರಬಹುದು, ಉಬ್ಬಿಸುವುದು ಇರಬಹುದು, ತಗ್ಗಿಸುವುದು ಇರಬಹುದು, ಇವೆಲ್ಲಾ ಶಾಸನಗಳ ಮೂಲಕವೇ ಆಗಬೇಕು ಆದ್ದರಿಂದ ಶಾಸನವನ್ನು ತಂದಿದ್ದೇವೆ. ಈ ಸೆಸ್ ಅನ್ನು ನಾವು ಪುರಸಭೆಗಳಿಗೆ in addition to the taxes levied ಮನೆಗಂದಾಯ ಮತ್ತು ಬಿಲ್ಡಿಂಗ್, ನೀರಿನ ತೆರಿಗೆ ಇದೆಲ್ಲವನ್ನೂ ಹೊರತುಪಡಿಸಿ, ಈ ಸೆಸ್ ಅನ್ನು ಹಾಕುತ್ತಿದ್ದೇವೆ. The cess under Motor Vehicles Taxation Act ಸ್ಟಾ ಂಪ್ ಕೂಡ ಲೆವಿ ಮಾಡುತ್ತೇವೆ. in addition to the motor vehicle's tax. So, ಆದ್ದರಿಂದ ಈ ಎರಡನೂ in addition to the taxes already levied under different legislations. ಅದೇ ರೀತಿ, ಇಲ್ಲಿ ಲೆವಿ ಮಾಡಿರತಕ್ಕಂಥದ್ದನ್ನು ಬಳಕೆ ಮಾಡಿಕೊಳ್ಳುವುದಕ್ಕೂ ಅಲ್ಲಿಗೇ ಉಪಯೋಗ ಮಾಡಿಕೊಳ್ಳುತ್ತೇವೆ. ಬಂಡವಾಳ ಇಲ್ಲದ ಬಡಾಯಿ ಯಾವ ಸರ್ಕಾರ ಬಂಡವಾಲ ಇಟ್ಟುಕೊಂಡು ಬಡಾಯಿ ಮಾಡಿರುವುದು ನನಗೆ ಗೊತ್ತಾಗಬೇಕು. ಎಲ್ಲಾ ಸರ್ಕಾರಗಳೂ ಬಂಡವಾಳ ಇಲ್ಲದೆಯೇ ಬಡಾಯಿ ಕೊಚ್ಚಿಕೊಳ್ಳುತ್ತವೆ. ಆಮೇಲೆ ಅದಕ್ಕೆ ಬೇಕಾದ ಬಂಡವಾಳ ಒದಗಿಸುತ್ತವೆ. ಆ ಬಂಡವಾಳ ಒದಗಿಸುವುದರಲ್ಲೇ, ಈ ಸಭೆಯ ಅದರಲ್ಲೂ ವಿಶೇಷವಾಗಿ ಅರ್ಥ ಮಂತ್ರಿಗಳ ಬುದ್ಧಿವಂತಿಕೆ ಮತ್ತು ಬುದ್ಧಿಮತ್ತೆ ಇರತಕ್ಕಂಥಾದ್ದು. ಅದಕ್ಕೋಸ್ಕರ ways and means ಎನ್ನುತ್ತೇವೆ, ಇನ್ನೊಂದು ರೂಪದಲ್ಲಿ ಹೇಳುತ್ತೇವೆ. ಆದ್ದರಿಂದ ಈ ಮಸೂದೆಯಲ್ಲಿ ಒಟ್ಟು ಕಲೆಕ್ಷನ್ ಆಗಿರತಕ್ಕಂಥದ್ದು

ಆಗಲೀ ಒಟ್ಟು ಎಕ್ಸ್ ಪೆಂಡೀಚರ್ ಆಗಿರತಕ್ಕಂಥದ್ದು ಆಗಲೀ ಡೀಟೈಲ್ಸ್ ಸಿಗುವುದಿಲ್ಲ. This is only a consequential Bill. Therefore, for that limited purpose we have brought the Bill.

Mr. Speaker:- It is only to collect the amount.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೇ, ಹಿಂದೆ ಕಲೆಕ್ಟ್ ಮಾಡಿದಂತಹ ಅಮೌಂಟ್ ಅನ್ನು.....

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೆ, I have to go back to the budget theory, the whole statement of The budget.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಈ ಹಿಂದೆ ಹಣವನ್ನು ಏನು ಕಲೆಕ್ಟ್ ಮಾಡಿದ್ದಾರೆ.....

ಅಧ್ಯಕ್ಷರು:- ಅಲ್ಲಾ ಸ್ವಾಮಿ, ಇದು just a permission to collect the amount ಅಷ್ಟೇ.

ಶ್ರೀ ಎ. ರಾಮದಾಸ್ :- ಸಾರ್ ನಮಗೆ ಇಲ್ಲಿ ಸ್ಪಷ್ಟತೆ ಸಿಗುತ್ತಿಲ್ಲ. ದಯಮಾಡಿ...

ಅಧ್ಯಕ್ಷರು :- ಇದು ಇನ್ನೂ ಕಲೆಕ್ಟ್ ಮಾಡಿಲ್ಲ, ಇನ್ನು ಇದರ ಬಗ್ಗೆ ಡೀಟೈಲ್ಸ್ ಹೇಳುವುದಾದರೂ ಏನಿದೆ?

ಶ್ರೀ ಆರ್. ಅಶೋಕ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಬೆಂಗಳೂರಿನಲ್ಲಿ ಕಲೆಕ್ಟ್ ಮಾಡಿದ್ದಾರೆ.

ಶ್ರೀ ಎ. ರಾಮದಾಸ್ :- ಅದು ಬೇರೆ ಕಡೆ ಇರಲಿಲ್ಲ.

ಶ್ರೀ ಆರ್. ಅಶೋಕ್ :- ಬೆಂಗಳೂರನಲ್ಲಿ ಲೈಟ್ ಎಲಿವೇಟೆಡ್ ರೈಲ್ವೆ ಟ್ರಾನ್ಸ್‌ಪೋರ್ಟ್ ಸರ್ವೀಸ್ ಮಾಡುತ್ತೇವೆ ಎಂದ್ಹೇಳಿ ಸುಮಾರು 250 ಕೋಟಿ ರೂಪಾಯಿಗಳ ಮೇಲೆ ಕಲೆಕ್ಟ್ ಮಾಡಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಕಲೆಕ್ಟ್ ಮಾಡಿದ್ದಾರೆ. 250 ಕೋಟಿ ರೂಪಾಯಿಗಳ ಮೇಲೆ ಇದನ್ನು ಕಲೆಕ್ಟ್ ಮಾಡಿದ್ದಾರೆ. ಆದರೆ ಇದುವರೆಗೂ ಆ ಪ್ರಾಜೆಕ್ಟೇ ಮಾಡಲಿಲ್ಲ. ಪ್ರಾಜೆಕ್ಟ್ ಮಾಡಲಿಕ್ಕೆ ಹೋಗಿ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಪ್ರಾಜೆಕ್ಟ್ ಇನ್ನೂ ಇಂಪ್ಲಿಮೆಂಟ್ ಆಗಿಲ್ಲ. ಇದು ಫೇಲ್ಯೂರ್ ಆಯಿತು ಎಂದು ಹೇಳುವುದಕ್ಕೋಸ್ಕರ ಖರ್ಚು ಮಾಡಿದ್ದಾರೆ. ನಾವು ಮಾಡಿದ ಈ ಪ್ರಾಜೆಕ್ಟ್ ಫೇಲ್ಯೂರ್ ಆಯಿತು, ಬೆಂಗಳೂರಿಗೆ ಇದರ ಉಪಯೋಗ ಇಲ್ಲ ಎಂದು ಹೇಳುವುದಕ್ಕೆ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸಂಬಳಕ್ಕಾಗಿ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಬೆಂಗಳೂರಿಗೆ ಉಪಯೋಗ ಇಲ್ಲ. ಬೇರೆ ಕಡೆಗೆ ಏಕೆ ಇಂಪ್ಲಿಮೆಂಟ್ ಮಾಡುತ್ತೀರಿ? ಬೇರೆಯವರು ಏಕೆ ಇದಕ್ಕೆ ಬಲಿಪಶು ಆಗಬೇಕು? ಇದನ್ನು ಇಂಪ್ಲಿಮೆಂಟ್ ಮಾಡುವುದರಿಂದ ಏನೂ ಉಪಯೋಗ ಇಲ್ಲ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :- ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ, ಈ ತೆರಿಗೆ ಹಾಕಿರತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ಮಹಾನದರ ಜನತೆಗೆ, ಬೆಂಗಳೂರಿಗೆ ಒಂದು ಸೌಲಭ್ಯ ಮಾಡತಕ್ಕಂಥ ದೃಷ್ಟಿಯಿಂದ ಹಾಕುತ್ತಿದ್ದೇವೆ ಎನ್ನತಕ್ಕಂಥ ಒಂದು ಆಶ್ವಾಸನೆ ಕೊಟ್ಟು, ಆ ಒಂದು ಸಮಯದಲ್ಲಿ, ಆ ಒಂದು ನಂಬಿಕೆ ಮೇಲೆ ಜನರೂ ಕೂಡ ಈ ಒಂದು

ತೆರಿಗೆಯನ್ನು ಒಪ್ಪಿಕೊಂಡಿದ್ದರು. ಈಗ ಕಲೆಕ್ಟ್ ಆಗಿರತಕ್ಕಂಥದ್ದು 300 ಕೋಟಿ ರೂಪಾಯಿಗಳು ಆಗಿರಬಹುದು ಅಥವಾ 400 ಕೋಟಿ ರೂಪಾಯಿಗಳು ಆಗಿರಬಹುದು, ಏನು ಬೆಂಗಳೂರಿನ ಜನತೆ ಈ ಸೆಸ್ ಅನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ, ಬೆಂಗಳೂರಿಗೆ ಉಪಯೋಗವಾಗುತ್ತದೆ ಎನ್ನುವಂತಹ ಉದ್ದೇಶದಿಂದ ಇದನ್ನು ಕೊಟ್ಟಿದ್ದಾರೆ. ಇವತ್ತು ಅದನ್ನು ಬದಲಾಯಿಸಿ ಆ ಹಣವನ್ನು ಬೇರೆ ಕಡೆಗೆ ಖರ್ಚು ಮಾಡಿದಾಗ, ಅವರ ಒಂದು ನಂಬಿಕೆಗೆ ದ್ರೋಹ ಮಾಡಿದಂತಾಗುವುದಿಲ್ಲವೇ ಎಂಬುದು ನನ್ನ ಪ್ರಶ್ನೆಯಾಗಿದೆ. ಏಕೆಂದರೆ ದುಡ್ಡು ಇದುವರೆಗೂ ಸಂಗ್ರಹ ಆಗಿರತಕ್ಕದ್ದು.....

(ಗೊಂದಲ)

ಅಧ್ಯಕ್ಷರು :- ಆ ಉದ್ದೇಶ ಕಲೆಕ್ಟ್ ಮಾಡುವಾಗ ಇನ್ನು ಮುಂದೆಯಾದರೂ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು :- ಇನ್ನು ಮುಂದೆ ಖರ್ಚು ಮಾಡುತ್ತೇವೆ ಎಂದು ಹೇಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ದಿನೇಶ್‌ರವರು ಎತ್ತಿರತಕ್ಕಂಥ ಪ್ರಶ್ನೆ, ಬೆಂಗಳೂರು ನಗರದಲ್ಲಿ ಸೆಸ್ ವಸೂಲು ಮಾಡುತ್ತೀರಿ, ಖರ್ಚು ಬೇರೆ ಕಡೆಗೆ ಮಾಡುತ್ತೀರಿ ಎಂಬುದಾಗಿದೆ. ಹಾಗಾಗಿಲ್ಲ ಇಲ್ಲಿ ಇದುವರೆಗೆ ನಗರದಲ್ಲಷ್ಟೇ ವಸೂಲು ಮಾಡಿ, ನಗರಕ್ಕಷ್ಟೇ ಖರ್ಚು ಮಾಡತಕ್ಕಂಥಾದ್ದು. ಖರ್ಚು ಮಾಡುವುದಕ್ಕೂ ಒಂದು ಮೆಥೆಡ್ ಇದೆ. ಶೇಕಡ 33 ರಷ್ಟನ್ನು ಬಿ.ಎಂ.ಆರ್.ಟಿ.ಎಲ್.ಗೂ, ಶೇಕಡ 67ನ್ನು infrastructure development ಗೂ ಖರ್ಚು ಮಾಡಬೇಕು ಎನ್ನತಕ್ಕಂಥ ನಿಯಮಾವಳಿಗಳನ್ನು ಹಾಕಿಕೊಂಡಿದ್ದೇವೆ. ಈಗ ಈ ಬಿಲ್‌ನಲ್ಲಿ ಏನು ಮಾಡಿದ್ದೇವೆ ಎಂದರೆ, the facilities and the fine, if I could call that, this cess is being extended throughout the state. ರಾಜ್ಯ ವ್ಯಾಪ್ತಿಯಲ್ಲಿ ಸೆಸ್ ಹಾಕುತ್ತಿದ್ದೇವೆ. ಈ ಸೆಸ್ ಬೆಂಗಳೂರಿಗೆ ಮಾತ್ರ ಸೀಮಿತವಾಗಿತ್ತು. ಆ ತೆರಿಗೆ ಕೂಡ ರಾಜ್ಯ ಮಟ್ಟಕ್ಕೆ ಹೋಗುತ್ತದೆ, ಖರ್ಚು ವೆಚ್ಚಗಳೂ ಕೂಡ ರಾಜ್ಯ ಮಟ್ಟಕ್ಕೆ ಹೋಗುತ್ತದೆ. ನಿಮಗೆ ಬೆಂಗಳೂರು ನಗರದ ಬಗ್ಗೆ ಎಷ್ಟು ಕಾಳಜಿ ಇದೆಯೋ, ನಮಗೆ ಸುಳ್ಯ ನಗರದ ಬಗ್ಗೆಯೂ ಕೂಡಾ ಅಷ್ಟೇ ಕಾಳಜಿ ಇದೆ. ಅದು ಕೂಡ ಬೆಳೆಯಬೇಕಲ್ಲವೇ? ಅದಕ್ಕಾಗಿ ಇದನ್ನು ತಂದಿದ್ದೇವೆ. ಮಾನ್ಯ ರಾಮದಾಸ್ ರವರ ಮೈಸೂರಿಗೂ ಕೂಡ ಅನುಕೂಲವಾಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ.

Mr. Speaker:- Minister has given the sufficient answer.

(ಗೊಂದಲ)

ಅಧ್ಯಕ್ಷರು :- ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ

ಅಧ್ಯಕ್ಷರು :- ದಯಮಾಡಿ ಬೆಂಗಳೂರು ಮಹಾ ನಗರಕ್ಕೆ .....

(ಗೊಂದಲ)

ಶ್ರೀ ಆರ್. ಅಶೋಕ್ :- ಮಾನ್ಯ ಅಧ್ಯಕ್ಷರೇ, ಕಲೆಕ್ಟ್ ಮಾಡಿರುವುದನ್ನೇ ಉಪಯೋಗ ಮಾಡಿಲ್ಲ.

ಅಧ್ಯಕ್ಷರು :- ಪ್ಲಾನ್ ಮಾಡಬೇಕಲ್ಲವೇ? ತಕ್ಷಣವೇ ಉಪಯೋಗ ಮಾಡುವುದಕ್ಕಾಗುತ್ತದೆಯೇ?

ಶ್ರೀ ಆರ್. ಅಶೋಕ್ :- ಮಾನ್ಯ ಅಧ್ಯಕ್ಷರೆ, ಅದನ್ನು ಮಾಡುವುದಕ್ಕೋಸ್ಕರ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಆ ಪ್ಲಾನೇ ಮಾಡುವುದಕ್ಕಾಗುವುದಿಲ್ಲ ಎಂದು ಫೇಲ್ಯೂರ್ ಆಗಿದೆ. ಅದಕ್ಕೆ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸಂಬಳಕ್ಕೋಸ್ಕರ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸೆಸ್ ಕಲೆಕ್ಟ್ ಮಾಡಿರುವುದೆಲ್ಲಾ ಇದಕ್ಕೇ ಹೊರಟು ಹೋಯಿತಲ್ಲಾ. 8 ವರ್ಷಗಳಿಂದ ಇವರ ಇದರ ಕೈಯಲ್ಲಿ ಮಾಡಲಿಕ್ಕೆ ಆಗಲಿಲ್ಲ..... ಹೊಸ ಜಿಲ್ಲೆಗಳು ಹಾಗೂ ಹೊಸ ಕಾರ್ಪೊರೇಷನ್‌ಗಳು ಏತಕ್ಕೆ ಈ ತೆರಿಗೆ ಕೊಡಬೇಕು?

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ಆಡಳಿತದ ಅನುಭವವಿರತಕ್ಕಂತಹ ಮತ್ತು ಅದೇ ಇಲಾಖೆಯಲ್ಲಿ ಹಿಂದೆ ಮಂತ್ರಿಗಳಾಗಿದ್ದಂತಹ ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ವಿಚಾರವನ್ನು ಹೇಳುವಾಗ ನನಗೆ ಡೌಟ್ ಪ್ರಾರಂಭವಾಗಿದ್ದು. ಈಗಾಗಲೇ ಬೆಂಗಳೂರಿನಲ್ಲಿ ಏನು ಈ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಕಲೆಕ್ಟ್ ಮಾಡಿದ್ದರು ಅದನ್ನು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಉಪಯೋಗ ಮಾಡುವುದಕ್ಕೆ ನಾನು ಯಾವುದೇ ಕಾರಣಕ್ಕೆ ವಿರೋಧ ಮಾಡುವುದಿಲ್ಲ. ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ 1957 ಎಂದು ಏನಿದೆ ಇದು ಮೊದಲನೇ ಭಾಗವಾಯಿತು. ಅದರ ಜೊತೆಯಲ್ಲಿಯೋ ಕರ್ನಾಟಕ ಸ್ಟಾ ಂಪ್ ಅಧಿನಿಯಮ 1957ರ ಅಡಿಯಲ್ಲಿ ತಿದ್ದುಪಡಿ ಎಂದು ಎರಡು ಅಂಶಗಳು ಇವೆ. ಮೊದಲನೇ ಅಂಶ ವಾಹನದ ಮೇಲೆ ತಾವು ಬೆಂಗಳೂರು ಮಹಾ ನಗರದಲ್ಲ ಮಾತ್ರ ಇಲ್ಲಿಯವರೆಗೆ ಸೆಸ್ ಹಾಕಿ ಕಲೆಕ್ಟ್ ಮಾಡುತ್ತಿದ್ದೀರಿ. ಅದನ್ನು ಎಕ್ಸ್‌ಪೆರಿಮೆಂಟಲ್ ಬೇಸಿಸ್ ಎಂದು ಹೇಳಿ ಇಲ್ಲಿಯ ಇನ್‌ಫ್ರಾಸ್ಟ್ರಕ್ಚರ್‌ಗೆ ಖರ್ಚು ಮಾಡುವುದಕ್ಕೋಸ್ಕರ ಮಾಡಿದ್ದಿರಿ. ಯಾವ ರೀತಿ ಖರ್ಚಾಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಬೇರೆ ಬೇರೆ ಮಹಾ ನಗರಗಳಿಗೆ ಕೂಡ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಹಾಕುವುದಕ್ಕೆ ಇದರಿಂದ ಪ್ರಾವಿಷನ್ ಆಗುತ್ತದೆ. ಈ ದೃಷ್ಟಿಯಿಂದ ಈಗಾಗಲೇ ಕಲೆಕ್ಟ್ ಮಾಡಿರುವಂತಹ ಸೆಸ್‌ಗಳ ಬಗ್ಗೆ ಕ್ವೊಶ್ಚನ್ಸ್ ಮಾಡಿ ನಾನು ಮತ್ತು ಜಗದೀಶ್ ಶೆಟ್ಟರ್ ನಾವೆಲ್ಲರೂ ಸಹಿ ಮಾಡಿ ಈಗಾಗಲೇ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಆಕ್ಟ್ ಏನು ಅಮೆಂಡ್‌ಮೆಂಟ್ ಆಗಿದೆ ಅದರ ಪರಾಮರ್ಶೆಗೋಸ್ಕರ ಚರ್ಚೆ ಆಗಬೇಕೆಂದು ಅವತ್ತಿನ ದಿವಸವೇ ಸೂಚನೆ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಗರಾಭಿವೃದ್ಧಿ ಮಂತ್ರಿಗಳು ಕಳೆದ 29ನೇ ತಾರೀಖು ನಮ್ಮ ಸಭೆ ಕರೆದಿದ್ದರು. ಆ ಸಭೆಯಲ್ಲಿ ನಾವೂಕೂಡ ಭಾಗವಹಿಸಿದ್ದೆವು. ಒಂದು ಅಂಶ ಅಲ್ಲಿ ಹೇಳಿದ್ದಾರೆ. ವಾಹನಗಳ ಮೇಲೆ ಏನು ಇನ್‌ಫ್ರಾಸ್ಟ್ರಕ್ಚರ್ ಸೆಸ್ ಹಾಕುತ್ತಿದ್ದೇವೆ, ಅದನ್ನು ಕೈಬಿಡುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತಿದೆ ಎನ್ನುವ ಅಂಶವನ್ನು ಹೇಳಿದ್ದಾರೆ. ಹೀಗಿರುವಾಗ ಈ ಆಕ್ಟ್ ಅಡಿಯಲ್ಲಿ ತಾವು ಆ ಸೆಸ್ ಲೆವಿ ಮಾಡಿ ಅದನ್ನು ಹಾಕಲಿಕ್ಕೋಸ್ಕರ ಏನು ಪ್ರಯತ್ನ ಮಾಡುತ್ತಿದ್ದೀರಿ ಇದು ಇಂಟರ್ ಲಿಂಕ್ ಇದೆ. ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ ಮತ್ತು ಇದು ಎರಡೂ ಇಂಟರ್ ಲಿಂಕ್ ಇರುವುದರಿಂದ ತಾವು ಇದರ ಬಗ್ಗೆ ಸ್ಪಷ್ಟತೆ ಮಾಡಿದ ನಂತರ ಇದನ್ನು ಪಾಸ್ ಮಾಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ.

ಶ್ರೀ ಡಿ.ಬಿ. ಚಂದ್ರೇಗೌಡ:- ಇಂಟರ್‌ಲಿಂಕ್ ಎಂದು ಏನು ಹೇಳಿದಿರಿ ಅದು ಎಕ್ಸಾ ಕ್ಟ್‌ಲಿ ಕರೆಕ್ಟ್, ಈ ಲಿಂಕ್ ಬಜೆಟರಿ ಪ್ರಾವಿಷನ್‌ನಲ್ಲಿ ಬರತಕ್ಕಂಥದ್ದು. ಯಾವ ಯಾವ ತೆರಿಗೆಗಳನ್ನು ಮೋಟಾರು ವೆಹಿಕಲ್‌ಗಳಿಗೆ ಹಾಕತಕ್ಕಂಥದ್ದು ಇರಲಿ, ಸ್ಟಾ ಂಪ್ ಡ್ಯೂಟಿ ಮೇಲೆ

ಹಾಕತಕ್ಕಂಥದ್ದು ಇರಲಿ ಇವೆಲ್ಲವನ್ನೂ ಕನ್‌ಸಾಲಿಡೇಟೆಡ್ ಮಾಡಿ Finance Minister has to present a Bill before this House. ಇದು 1998ನೇ ಇಸವಿಯಿಂದ ಇದೆ. ಇದು ಹೊಸ ತೆರಿಗೆ ಅಲ್ಲ. Please make it in the mind.

ಆ ತೆರಿಗೆಯನ್ನು ಇವತ್ತು ರಾಜ್ಯ ವ್ಯಾಪ್ತಿಯಾಗಿ ವಿಸ್ತರಿಸಿದ್ದೇವೆ.

ವಿಸ್ತರಣೆ ಮಾಡುವಾಗ ಅದರ ಲಾಭ ಮತ್ತು ನಷ್ಟ ಬೆಂಗಳೂರು ನಗರಕ್ಕೆ ಎಷ್ಟು ಲಾಭಾಗಿದೆ. ಅಷ್ಟೇ ಲಾಭ ಮೈಸೂರು ನಗರಕ್ಕೆ ಆಗಬೇಕಾಗಿದೆ. ಅಷ್ಟೇ ಲಾಭ ಬೇರೆ ಬೇರೆ ನಗರಗಳಿಗೆ ಆಗಬೇಕು. ನೀವು ಎಲ್ಲದಕ್ಕೂ ವಿರೋಧ ಮಾಡುತ್ತೀರಿ. ವಿರೋಧಕ್ಕಾಗಿ ವಿರೋಧ ಅಲ್ಲ. ಸರ್ಕಾರ ನಡೆಸಿರುವ ಅನುಭವವಿರಬೇಕು. ಗೌಡರು ಇದ್ದಾರೆ ಅವರಿಗೆ ಅನುಭವ ಇದೆ. ಒಟ್ಟು ಲೆಕ್ಕಾಚಾರ ಎಲ್ಲಾ ಬೇಕೆಂದು ಹೇಳಿದರೆ ಬಜೆಟ್ ಮೇಲೆ ಡಿಸ್ಕಷನ್ ಆಗಬೇಕು. ಈಗ ಕಾನ್‌ಸಿಸ್ಟೆನ್ಸಿಯ ತಂದಿದ್ದೇವೆ. ಈ ಎರಡು ಅಡಿಷನಲ್ ಟ್ಯಾಕ್ಸ್‌ಗಳನ್ನು ತರತಕ್ಕಂತಹ ಜವಾಬ್ದಾರಿ ಹಣಕಾಸು ಸಚಿವರಿಗೆ ಸೇರಿದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಅದರ ಮಂತ್ರಿಯಾಗಿರುವುದರಿಂದ ನಾವು ಈ ಬಿಲ್ ತಂದಿದ್ದೇವೆ. ಅದಕ್ಕಿಂತ ಹೆಚ್ಚು ವಿಸ್ತರಣೆ ಚರ್ಚೆಗೆ ಅವಕಾಶವಿಲ್ಲ. ಮಾನ್ಯ ರಾಮದಾಸ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ. ಅಡಿಷನಲ್ ಟ್ಯಾಕ್ಸ್‌ಷನ್ ನಾವು ಏನು ಮಾಡುತ್ತೇವೆ, ಇದೆ ಟ್ಯಾಕ್ಸೇಷನ್ ಎಕ್ಸ್‌ಟೆಂಡ್ ಮಾಡಿದ್ದೇವೆಂದು ಹೇಳಿದ್ದೇವೆ. ಇದರಿಂದ ಟ್ಯಾಕ್ಸೇಷನ್ ಎಕ್ಸ್‌ಟೆಂಡ್ ಆಗುತ್ತದೆ. ಬರತಕ್ಕಂತಹ ಲಾಭವೂ ಎಕ್ಸೆಟೆಂಡ್ ಆಗುತ್ತದೆ. ಟ್ಯಾಕ್ಸೇಷನ್ ಎಕ್ಸ್‌ಟೆಂಡ್ ಮಾಡಬೇಡಿ, ಡೆವಪ್‌ಮೆಂಟ್ ಮಾಡಬೇಡಿ ಎಂದರೆ ಹೇಗೆ?

ಶ್ರೀ ಎ. ರಾಮದಾಸ್ :- ಸನ್ಮಾನ್ಯ ಸಿಂಧ್ಯರವರು ಏನು ಪ್ರಶ್ನೆ ಕೇಳಿದರು ಅದೂ ಕೂಡ ಕ್ಲಾರಿಫೈ ಆಗಬೇಕು. ಬೆಂಗಳೂರು ಮಹಾ ನಗರಕ್ಕೆ ತಾವು ಹಾಕಿದ ಈ ಸೆಸ್ ಯಾವ ರೀತಿಯಲ್ಲಿ ಉಪಯೋಗವಾಗಿದೆ ಎನ್ನುವ ಆಧಾರದ ಮೇಲೆ ಬೇರೆ ಕಡೆ ಅದರ ಅದರ ಆಧಾರದ ಮೇಲೆ ಬೇರೆ ಬೇರೆ ಮಹಾ ನಗರಗಳಿಗೆ ಹಾಕಬೇಕೇ ಹೊರತು ಕೆಟ್ಟ ಅನುಭವ ನಮ್ಮ ಬೆಂಗಳೂರು ಮಹಾ ನಗರದಲ್ಲಿ ಇರುವಾಗ ಸೆಸ್ ಹಾಕಿ ನಾವು ಸರ್ಕಾರದಲ್ಲಿ ಏನೂ ಖರ್ಚು ಮಾಡಿಲ್ಲ ಎಂದರೆ ಬೇರೆ ನಗರಗಳಿಗೆ ಎಕ್ಸ್‌ಟೆಂಡ್ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :- ಒಟ್ಟು ಚರ್ಚೆ ಮಾಡಲು ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಸರ್ಕಾರಕ್ಕೆ ಬಹುಮತ ಇರುವುದರಿಂದ ಈ ವಿಧೇಯಕವನ್ನು ಮಸೂದೆ ಮಾಡಿಕೊಳ್ಳುತ್ತಾರೆಂಬ ಪರಿಜ್ಞಾನ ನನಗೆ ಇದೆ. ನಾನು ಬಜೆಟ್ ಭಾಷಣದಲ್ಲಿ ಮಾತನಾಡುವುದಕ್ಕೆ ಸಮಯದ ಅಭಾವ ಇದ್ದುದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಜನಗಳಿಗೆ ನಾವು ತಿಳುವಳಿಕೆ ಕೊಡುವುದೇನೆಂದರೆ, ಬೆಂಗಳೂರು ನಗರದ ಮೂಲಭೂತ ಸೌಲಭ್ಯಗಳನ್ನು ಹೆಚ್ಚು ಮಾಡಬೇಕು, ಅಭಿವೃದ್ಧಿ ಮಾಡಬೇಕು. ಪರ್ಟಿಕ್ಯುಲರ್‌ಲಿ ಮಾಸ್ ರ್ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್ ತರಬೇಕೆನ್ನುವ ಉದ್ದೇಶದಿಂದ ಈ ಸೆಸ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡುವ ಕಾರ್ಯಕ್ರಮ ನಮ್ಮ ಸರ್ಕಾರ ಇದ್ದಾಗ 1998ನೇ ಇಸವಿಯಲ್ಲಿ ಪ್ರಾರಂಭ ಮಾಡಿದೆವು. ಅದು ಸುಮಾರು 250 ಕೋಟಿಯಿಂದ 300 ಕೋಟಿ ರೂಪಾಯಿಯಷ್ಟು ಕಲೆಕ್ಟ್ ಆಗಿದೆ. Right now it is there.

ಈಗ ಇವರು ಏನು ಮಾಡಿದ್ದಾರೆ, ಅಮೆಂಡ್‌ಮೆಂಟ್ ಮೂಲಕ ಆ ಸೆಸ್ ಅನ್ನು ನಾವು ಏನು ಬೆಂಗಳೂರು ಸಿಟಿಯಲ್ಲಿ ಹಾಕುತ್ತಿದ್ದೇವು ಅದನ್ನು ರಾಜ್ಯದಲ್ಲಿ ಬೇರೆ ಕಡೆ ಸಹಿತ ಹಾಕಲು

ಮಾಡಿದ್ದಾರೆ. This is one way of robbing the common man. Robbery, ಇದು ಹೇಗೆಂದರೆ, ನೀವು ಸಾಮಾನ್ಯವಾದ ಜನಗಳಿಗೆ ಬೆಂಗಳೂರು ನಗರದಲ್ಲಿ ಕಲೆಕ್ಟ್ ಆಗಿರುವ ಸೆಸ್ ಖರ್ಚಾಗಿಲ್ಲ. ನಿಮ್ಮ ಹತ್ತಿರ ದುಡ್ಡು ಇಲ್ಲದೆ ಇರುವುದರಿಂದ ಡೈರೆಕ್ಟಾಗಿ ಯಾವುದಾದರೂ ಟ್ಯಾಕ್ಸ್ ಹೆಚ್ಚು ಮಾಡಿದರೆ ಜನ ಟೀಕೆ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಈ ಸೆಸ್ಸನ್ನು ಮತ್ತೊಂದು ರೂಪದಲ್ಲಿ ಹಾಕುತ್ತಿದ್ದೀರಿ. ಐದು ಪರ್ಸೆಂಟ್ ನಾವು ಬೆಂಗಳೂರು ನಗರದವರು ಕೊಡುತ್ತಿದ್ದೇವೆ. ನಾವು ಏನೂ ಮಾಡುವುದಕ್ಕಾಗಲಿಲ್ಲ. ಮಾನ್ಯ ಆಶೋಕ್‌ರವರು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದರ ಸತ್ಯ ಅಸತ್ಯತೆಗಳನ್ನು ಸರ್ಕಾರ ತಿಳಿಸಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಬಂದಿರತಕ್ಕಂತಹ ಮಾಹಿತಿ ಪ್ರಕಾರ 10 ಕೋಟಿ ರೂ ಇದರಲ್ಲಿ ಅನ್ಯಾಯವಾಗಿ ಖರ್ಚಾಗಿದೆ. ಅವರಿಗೆ ಏನೂ ಕೆಲಸವಿಲ್ಲ, ಸುಮ್ಮನೆ ಕುಳಿತಿದ್ದಾರೆ. ಮಾಸ್ ರ್ಯಾಪಿಡ್ ಟ್ರಾನ್ಸ್ ಪೋರ್ಟ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಧಿಕಾರಿಗಳ ಸಂಬಳಕ್ಕೆ ಮಾತ್ರ ದುಡ್ಡು ಖರ್ಚಾಗುತ್ತಿದೆ ಎಂದು ಅವರು ಹೇಳಿದ್ದಾರೆ. We know your limitations. ನಾವು ಬೆಂಗಳೂರು ಸಿಟಿಯಲ್ಲಿ ಯಾವ ರೀತಿ ಸೆಸ್ ಕಲೆಕ್ಟ್ ಮಾಡುತ್ತಿದ್ದೇವು ಅದನ್ನು ಇಡೀ ರಾಜ್ಯದ ಜನತೆ ಅಂದರೆ ತೆರಿಗೆದಾರರ ಮೂಲಕ ವಿಶೇಷವಾಗಿ ವಾಹನ ಮಾಲೀಕರ ಮೂಲಕ ಸೆಸ್ ಕಲೆಕ್ಟ್ ಮಾಡಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುತ್ತೇವೆಂದು ಸತ್ಯಕ್ಕೆ ದೂರವಾದ ಮಾತನ್ನು ಹೇಳಿ ಆ ದುಡ್ಡನ್ನು ಕಲೆಕ್ಟ್ ಮಾಡಿಕೊಂಡು ನಮ್ಮ treasuryಗೆ ಹಾಕಿಕೊಳ್ಳುತ್ತೇವೆಂದು ಹೇಳಿದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಗೊಂದಲ

ಅಧ್ಯಕ್ಷರು :- ದುಡ್ಡು ಕಲೆಕ್ಟ್ ಮಾಡಿದ್ದಾರೆ. ಮುಂದಕ್ಕೆ ಖರ್ಚು ಮಾಡುತ್ತಾರೆ.

ಶ್ರೀ ಡಿ.ಬಿ ಚಂದ್ರೇಗೌಡ :- ಹಿರಿಯ ಸದಸ್ಯರು ಸರ್ಕಾರ ಮಾನ್ಯ ಹೇಳುತ್ತಿದೆ ಎಂದು ಹೇಳುತ್ತಿದ್ದಾರೆ. ಅದು ಸರಿಯಾ?

ಅಧ್ಯಕ್ಷರು :- ದಯವಿಟ್ಟು ಆ ಪದವನ್ನು ಕಡತದಿಂದ ತಗೆದು ಹಾಕಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಅದನ್ನು ತೆಗೆಯುವುದೇ ಆದಲ್ಲಿ ಅದನ್ನು ಸಬ್‌ಸ್ಟಿಟ್ಯೂಟ್ ಮಾಡಿ ಸತ್ಯಕ್ಕೆ ದೂರವಾದುದು ಎಂದು ಹಾಕಿ. ನನ್ನದು ಏನೂ ತಕರಾರು ಇಲ್ಲ. ಆ ಪದ ಎನ್ನುವುದು ಪಾರ್ಲಿಮೆಂಟರಿ ಎಂದು ಹೇಳಿ ಜಡ್ಜ್‌ಮೆಂಟ್‌ಗಳು ಆಗಿವೆ. ನಾನು ಆ ರೀತಿ ಹೇಳುವುದು ನಿಮಗೆ ಅಹಿತಕರವಾದರೆ, ಸರ್ಕಾರ ಕೇಳುವುದಕ್ಕೆ ಕರ್ಕಶವಾದರೆ ದಯಮಾಡಿ ಸತ್ಯಕ್ಕೆ ದೂರವಾದುದು ಎಂದು ಹೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :- ಕರ್ನಾಟಕ ರಾಜ್ಯದ ಮೋಟಾರು ತೆರಿಗೆ ಯಾವುದು ಇದೆ, ಇಡೀ ದೇಶದಲ್ಲಿ ಗರಿಷ್ಟ ಪ್ರಮಾಣದಲ್ಲಿ ತೆರಿಗೆ ವಿಧಿಸಲಾಗಿದೆ ಎಂದು ಹೇಳುವುದು ಎಲ್ಲಾ ಟ್ರಾನ್ಸ್‌ಪೋರ್ಟರ್ಸ್ ಕಡೆಯಿಂದ ಬಂದಿರುವಂತಹ ದೂರು. ಜನರಿಗೆ ಇದರಿಂದ ಸಾಕಷ್ಟು ಹೊರೆಯಾಗಿದೆ. ಈ ತೆರಿಗೆ ಯಾವುದು ಇದೆ ಇದು ಬೆಂಗಳೂರಿನಲ್ಲಿ ವ್ಯಾಪಕವಾಗಿದೆ. ದಯವಿಟ್ಟು ಬೇರೆ ಕಡೆ ಎಕ್ಸ್‌ಟೆಂಡ್ ಮಾಡಬೇಡಿ. ಮಂಗಳೂರು ಡಿವಿಜನ್‌ನಲ್ಲಿ 21 ಕೋಟಿ ರೂಪಾಯಿಗಳು ಮೋಟಾರು ತೆರಿಗೆ ಸಂಗ್ರಹವಾಗುತ್ತಿದೆ. ನೀವು ಅಲ್ಲಿಯ ಮಹಾನಗರ ಪಾಲಿಕೆಗೆ ಇನ್‌ಫ್ರಾಸ್ಟ್ರಕ್ಚರ್‌ಗೆ ಕೊಡುವುದು ಕೇವಲ 25 ಲಕ್ಷ ರೂಪಾಯಿ. ಅತ್ಯಧಿಕ ತೆರಿಗೆ ಹೊರಿಸಿದ್ದೀರಿ. ಇದು ರಾಜ್ಯದ ಜನತೆಗೆ ದೊಡ್ಡ ಹೊರೆ ಆಗಿ ಬಿಡುತ್ತದೆ.

ಅಧ್ಯಕ್ಷರು :- ದುಡ್ಡು ಕಲೆಕ್ಟ್ ಮಾಡುವುದಕ್ಕೆ ಪರ್ಮಿಷನ್ ಅಷ್ಟೇ ಇದು.

ಶ್ರೀ ಕಾಗೋಡು ತಿಮ್ಮಪ್ಪ :- ಆಯವ್ಯಯ ಮಂಡಿಸಿರತಕ್ಕಂತಹ ಸಂದರ್ಭದಲ್ಲಿ ಹೊಸ ತೆರಿಗೆಗಳನ್ನು ಹಾಕುವ ವಿಚಾರ ಸುಧೀರ್ಘವಾಗಿ ಚರ್ಚೆಯಾಗಿ ಅನುಮೋದನೆಯಾಗಿದೆ. ಈ ಎಲ್ಲಾ ವಿಚಾರಗಳನ್ನು ಈ ಹಂತದಲ್ಲಿ ಚರ್ಚೆ ಮಾಡಬೇಕು ವಿನಃ ಈ ಹಂತದಲ್ಲಿ ಅಲ್ಲ.

ಶ್ರೀ ಎ. ರಾಮದಾಸ್ :- ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟ ಹಾಗೆ ಮಾತ್ರ ಚರ್ಚೆಯಾಗಿದೆ. ಇಡೀ ರಾಜ್ಯದಲ್ಲಿ ತೆರಿಗೆ ಹಾಕತಕ್ಕಂಥದ್ದರ ಬಗ್ಗೆ ಚರ್ಚೆಯಾಗಿಲ್ಲ. ಬೆಂಗಳೂರು ಮಹಾ ನಗರಕ್ಕೆ ಮಾತ್ರ ಸೀಮಿತವಾಗಿ ಚರ್ಚೆಯಾಗಿ ಹಿಂದಿನ ಸರ್ಕಾರ ಇದ್ದಾಗ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಹಾಕುತ್ತಿತ್ತು.

ಶ್ರೀ ಕಾಗೋಡುತಿಮ್ಮಪ್ಪ :- ಆಯವ್ಯಯವನ್ನು ಮಂಡಿಸತಕ್ಕಂತಹ ಸಂದರ್ಭದಲ್ಲಿ ಈ ತೆರಿಗೆಯನ್ನು ರಾಜ್ಯಾದ್ಯಂತ ವಿಸ್ತರಿಸುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿರುವ ಕಾರಣದಿಂದ ಅಲ್ಲಿ ಈ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು.

ಶ್ರೀ ಎ. ರಾಮದಾಸ್ :- ಸರ್ಕಾರಕ್ಕೆ ಈಗ ಹಕ್ಕು ಕೊಡುತ್ತಿದ್ದೇವೆ. ಹಕ್ಕನ್ನು ಕೊಡುವ ಸಂದರ್ಭದಲ್ಲಿ ನಾವು ವಿರೋಧ ಮಾಡುತ್ತಿದ್ದೇವೆ. ಸರ್ಕಾರಕ್ಕೆ ಯಾವುದೇ ಕಾರಣಕ್ಕೆ ಕೂಡ ಬೆಂಗಳೂರು ನಗರ ಬಿಟ್ಟು ಐದು ಕಾರ್ಪೊರೇಷನ್ ಇರುವಂತಹ ಎಲ್ಲಾ ಮುನಿಸಿಪಾಲಿಟಿಗಳು ಇವುಗಳ ಮೇಲೆ ಸೆಸ್ ಹಾಕಿ ಕಲೆಕ್ಟ್ ಮಾಡುವುದು ಏನಿದೆ, ಬೆಂಗಳೂರು ಮಹಾನಗರದಲ್ಲಿ ಆಗಿರುವಂತಹ ಕೆಟ್ಟ ಅನುಭವ ನಮ್ಮ ಮುಂದಿದೆ. ಹಣ ಕಲೆಕ್ಟ್ ಮಾಡಿ ಕಳೆದ ನಾಲ್ಕು ವರ್ಷಗಳಿಂದ ಕೋಟ್ಯಾಂತರ ರೂಪಾಯಿ ಹಣ ಬೇರೆ ಬೇರೆ ವ್ಯವಸ್ಥೆಗೆ ಹೋಗಿದೆ. ಆ ದೃಷ್ಟಿಯಿಂದ ದಯಮಾಡಿ ಸೆಸ್ ಕಲೆಕ್ಟ್ ಮಾಡುವುದಕ್ಕೆ ಮುಂಚೆ ರಾಜ್ಯದ ವ್ಯವಸ್ಥೆಗಳ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಈಗ ಎಷ್ಟು ಸೆಸ್ ಕಲೆಕ್ಟ್ ಆಗಿದೆ, ಅದನ್ನು ಯಾವುದಕ್ಕೆ ಖರ್ಚು ಮಾಡಿದ್ದೀರಿ, ಎಂಬುದು ಏನಾದರೂ ರಿಸಲ್ಟ್ ಗೊತ್ತಾದರೆ ಇಡೀ ರಾಜ್ಯಕ್ಕೆ ಎಕ್ಸ್‌ಟೆಂಡ್ ಮಾಡಬಹುದು. ಆದರೆ ಇಲ್ಲಿ ಏನೂ ಪ್ರಯೋಜನವಾಗಿಲ್ಲ 250 ಕೋಟಿ 300 ಕೋಟಿ ರೂ ಕಲೆಕ್ಟ್ ಮಾಡಿದ್ದೀರಿ. ಮಾನ್ಯ ಅಶೋಕ್‌ರವರು ಹೇಳಿದ ಪ್ರಕಾರ ಕೇವಲ 10 ಕೋಟಿ ರೂಪಾಯಿ ಇಲ್ಲಿ ಖರ್ಚಾಗಿದೆ. ಆದರ ಪ್ರಾಪರ್ ಯುಟಿಲೈಸೇಷನ್ ಆಗಿಲ್ಲ ಎಂದರೆ, ಅದರ ಲಾಭ ಜನರಿಗೆ ಸಿಗಲಿಲ್ಲ ಎಂದರೆ ಇನ್ನು ಬೇರೆ ಕಡೆ ಕಲೆಕ್ಟ್ ಮಾಡಿ ಅದು ಅಷ್ಟೂ ಬರ್ಡನ್ ಇಡೀ ರಾಜ್ಯದ ಜನತೆ ಮೇಲೆ ಬೀಳುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಹೊಸ ತೆರಿಗೆ ಇಲ್ಲ, ಹಳೆಯ ತೆರಿಗೆ ಇದ್ದುದು. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಬೆಂಗಳೂರಿಗೆ ಏನು ಸೀಮಿತವಾಗಿತ್ತು. ಆದನ್ನು ಎಕ್ಸ್‌ಟೆಂಟ್ ಮಾಡುತ್ತಿದ್ದೇವೆ. ಇನ್ ಫ್ರಾಸ್ಟ್ರಕ್ಚರ್ ಡೆವಲ್‌ಮೆಂಟ್ ಅನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದೇವೆ.

- ಗೊಂದಲ -

12.10 ಪಿ.ಎಂ

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೆ, ಈ ಮೊದಲು ಬೆಂಗಳೂರಿನಲ್ಲಿ ಮಾತ್ರ ತೆರಿಗೆ ವಸೂಲು ಮಾಡಲಾಗುತ್ತಿತ್ತು. ಆ ರೀತಿ ವಸೂಲಾದ ಹಣದ ಖರ್ಚು ಯಾವ ರೀತಿಯಲ್ಲಿ ಆಗಿದೆ ಎಂಬ ಬಗ್ಗೆ ವಿವರಣೆ ಕೊಟ್ಟು ತದನಂತರ ಇದರ ವ್ಯಾಪ್ತಿಯನ್ನು ರಾಜ್ಯ ಮಟ್ಟಕ್ಕೆ ವಿಸ್ತರಿಸಬೇಕು. ಏಕೆಂದರೆ ಇದು ಬೆಂಗಳೂರಿಗೆ ಹಳೆಯದಾದರೂ ರಾಜ್ಯಕ್ಕೆ ಹೊಸ ತೆರಿಗೆಯಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ರಾಜ್ಯಮಟ್ಟದಲ್ಲಿ ತೆರಿಗೆ ವಸೂಲು ಮಾಡುವುದನ್ನು ಈ ವಿಧೇಯಕದಲ್ಲಿ ವಿಸ್ತರಿಸಲಾಗಿದ್ದು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೇ ಆ ಹಣವನ್ನು ಉಪಯೋಗ ಮಾಡಲಾಗುವುದು. ಆದುದರಿಂದ ತಾವೇನು ತೆರಿಗೆ ಹೊಸದು ಎಂದು ಹೇಳುತ್ತಿದ್ದೀರಿ ಅದು ಸರಿಯಲ್ಲ. ಈ ತೆರಿಗೆ ಹಳೆಯದೇ ಆಗಿದೆ. ಈಗ ಇದರ ವಿಸ್ತರಣೆ ಆಗುತ್ತಿದೆಯಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಇದುವರೆಗೂ ಬೆಂಗಳೂರು ಸಿಟಿಗೆ ಮಾತ್ರ ಸೀಮಿತವಾಗಿ ಖರ್ಚು ಮಾಡತಕ್ಕಂಥದ್ದು ಇತ್ತು. ಈಗ ಟ್ಯಾಕ್ಸ್‌ನ್ನು ಇಡೀ ರಾಜ್ಯದಲ್ಲಿ ಕಲೆಕ್ಟ್ ಮಾಡುವುದರಿಂದ ಏನು ನಾವು ಮೂರನೇ ಎರಡು ಭಾಗ ಇಲ್ಲಿಯೇ ಖರ್ಚು ಮಾಡುತ್ತಿದ್ದೇವೆ ಇದು ಎಲ್ಲಾ ಕಡೆಗೂ ಕೂಡ ಪ್ರತಿ ಪಟ್ಟಣಕ್ಕೂ, ಹಳ್ಳಿಗಳಲ್ಲೂ ಕೂಡ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಈ ಹಣವನ್ನು ಉಪಯೋಗ ಮಾಡಬೇಕು ಎನ್ನತಕ್ಕಂಥ ಎಕ್ಸ್‌ಟೆನ್‌ಷನ್‌ನ್ನು ಮಾಡುತ್ತಿದ್ದೇವೆ. ಅದನ್ನು ನೀವು ವೆಲ್‌ಕಮ್ ಮಾಡಬೇಕೆ ಹೊರತಾಗಿ ಈ ಹಣ ಎಲ್ಲಿ ಮಾಡಿದ್ದು? ಆ ಹಣ ಏನು ಮಾಡಿದಿರಿ ಎಂದು ಕೇಳಿದರೆ ಹೇಗೆ?

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಹಿಂದೆ ಈ ತೆರಿಗೆ ವಸೂಲು ಮಾಡುತ್ತಿದ್ದುದ್ದು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿತ್ತು. ಈಗ ಇವರು ಇಡೀ ಕರ್ನಾಟಕಕ್ಕೆ ಇದನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದಾರೆ. ಆದರೆ ಬೆಂಗಳೂರು ನಗರದಲ್ಲಿ ವಸೂಲು ಮಾಡಿದ ತೆರಿಗೆ ಹಣ ಸುಮಾರು ಮೂರ್ನಾಲ್ಕು ವರ್ಷಗಳದ್ದು ಇದ್ದರೂ ಕೂಡ ಅದರ ಸದ್ವಿನಿಯೋಗ ಯಾವುದಕ್ಕೂ ಆಗಿಲ್ಲ. ಕೇವಲ ಹಣ ಕಲೆಕ್ಷನ್ ಆಗಿದ್ದು ಅದರ ವಿನಿಯೋಗ ಯಾವುದೇ ರೀತಿಯಲ್ಲೂ ಆಗದಿರುವ ಹಿನ್ನೆಲೆಯಲ್ಲಿ, ಹಿಂದೆ ಇಲ್ಲಿಯೇ ಆದಂಥ ತೊಂದರೆ ಆಧಾರದಲ್ಲಿ ರಾಜ್ಯಮಟ್ಟದಲ್ಲಿ ಇದನ್ನು ಮಾಡಬಾರದು ಎನ್ನುವಂಥದ್ದು ನಾನು ಹೇಳುವುದು. ಹಿಂದಿನದ್ದು ಬಳಕೆಯಾಗಿರುವ ಬಗ್ಗೆ ಮಾಹಿತಿ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಸ್ವಾಮಿ ಉಪನಾಯಕರೆ, ಯಾವುದೇ ಸರ್ಕಾರವಿದ್ದರೂ ಕೂಡ ಪ್ರತಿಯೊಂದು ತೆರಿಗೆಯಲ್ಲೂ ಕೂಡ, ಈ ತೆರಿಗೆಯನ್ನು ಇಂಥದ್ದಕ್ಕೆ ಹಾಕಿದ್ದೇವೆ, ಇದರ ಬಳಕೆ ಇಷ್ಟು, ಇದರ ಉಪಯೋಗ ಹೇಗಾಗಿದೆ ಎನ್ನುವ ಆಧಾರದ ಮೇಲೆ ತೆರಿಗೆ ಹಾಕುವುದಕ್ಕೆ ಆಗುವುದಿಲ್ಲ. ಒಂದೊಂದು ತೆರಿಗೆಯ ಲಾಭವನ್ನು ವಿಶಿಷ್ಟವಾಗಿ ಬೇರೆ ಬೇರೆ ರೂಪದಲ್ಲಿ ಆಳೆಯುವುದಕ್ಕೆ ಆಗುವುದಿಲ್ಲ. If you have those details we will discuss and debate. ಇಲ್ಲಿ ನೀವು ತಿಳಿದುಕೊಳ್ಳಬೇಕಾದ್ದು ಏನು ಎಂದರೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ತೆರಿಗೆ ರೂಪದಲ್ಲಿ ಬಂದಿರತಕ್ಕಂಥ ಒಟ್ಟು ಆದಾಯದಲ್ಲಿ ಶೇಕಡ 67 ರಷ್ಟು ಇನ್ ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೇ ಖರ್ಚು ಆಗುತ್ತದೆ. ಆದರೆ ಇದುವರೆಗೆ ಈ ಶೇಕಡ 67 ರಷ್ಟು ಹಣ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿತ್ತು. ಈಗ ಶೇಕಡ 67 ರಷ್ಟು ಹಣವನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಖರ್ಚು ಮಾಡುವುದಕ್ಕೆ ಅಧಿಕಾರವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಶಿವಾನಂದಪಾಟೀಲ್ :- ಹಾಗಿದ್ದರೆ ವೆಲ್‌ಕಮ್ ಮಾಡಿಬಿಡೋಣ. ಆ ಉದ್ದೇಶ ಇದ್ದರೆ ವೆಲ್‌ಕಮ್ ಮಾಡೋಣ.

ಶ್ರೀ ಡಿ.ವಿ. ಸದಾನಂದಗೌಡ :- ನೀವು ಹೇಳಿದ್ದನ್ನು ನಾವು ಒಪ್ಪಿಕೊಳ್ಳುತ್ತಿಲ್ಲ ಅಂತಲ್ಲ. ನಾವು ಇದು ಬೇಡ ಎಂದು ಹೇಳುತ್ತಿಲ್ಲ. ಈಗ ನೀವು ಹೊಸ ಟ್ಯಾಕ್ಸ್‌ನ್ನು ಹಾಕುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :- ಇದು ಓಲ್ಡ್ ಟ್ಯಾಕ್ಸ್.

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, Old tax to Bangalore only.

Sri D.B. Chandre Gowda: There cannot be tax for vehicles for Bangalore alone. Any cess on vehicles, goes to all vehicles of the State. We are extending the infrastructure development to other places; allover the State.

Sri D.V. Sadanadagowda: Formeshy, the tax was collected only in Bangalore.

Sri D.B. Chandregowda:- No, no any cess .... vehicles ಅಂದರೆ that goes to all the vehicles of the State.

Sri D.V. Sadananda gowda:- Whether you have collected the cess at Mangalore, even earlier.

Sri D.B. Chandregowda:- Yes, all over the State.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

" 2002ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು :- "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ,

2002ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಉತರ ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ;

" 2002ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎ. ರಾಮದಾಸ್ :- ನಾವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ಸರ್ಕಾರದಿಂದ ನಮಗೆ ಕ್ಲಾರಿಫಿಕೇಷನ್‌ಗೆ ಸರಿಯಾಗಿ ಉತ್ತರ ಬೇಕು.

ಅಧ್ಯಕ್ಷರು :- ನೀವೇ 45 ಕ್ಲಾರಿಫಿಕೇಷನ್ ಕೇಳಿದ್ದೀರಿ, 45ಕ್ಕೂ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅದಕ್ಕೂ ಹೆಚ್ಚು ಇನ್ನೇನು ಉತ್ತರ ಕೊಡುವುದಕ್ಕಾಗುತ್ತದೆ?

ಶ್ರೀ ಎ. ರಾಮದಾಸ್ :- ಕ್ಲಾರಿಫಿಕೇಷನ್ ಕೇಳುವುದಕ್ಕೆ ಶಾಸಕರಿಗೆ ಅಲೋ ಮಾಡದ ರೀತಿಯಲ್ಲಿ ಪಾಸ್ ಮಾಡಿಕೊಳ್ಳುವ ಅಧಿಕಾರ ಇದೆ ಎನ್ನುವಂಥದ್ದಕ್ಕೆ ನಾವು ವಿರೋಧ ಮಾಡುತ್ತೇವೆ.

ಅಧ್ಯಕ್ಷರು :- ನಿಮಿಷ್ಟ.

ಶ್ರೀ ಡಿ.ಬಿ. ಚಂದ್ರೇಗೌಡ:- ಬೆಂಗಳೂರಿನಲ್ಲಿ ಆಗುವ ಬೆಳವಣಿಗೆಗಳಿಗೆ ಮಾತ್ರ ಅವರು ಪರವಾಗಿದ್ದಾರೆ. ಬೆಂಗಳೂರನ್ನು ಹೊರತುಪಡಿಸಿ ಬೇರೆ ನಗರಗಳಲ್ಲೂ ಬೆಳವಣಿಗೆಗಳು ಆಗಬೇಕು ಎನ್ನತಕ್ಕಂಥದ್ದಕ್ಕೆ ರಾಮದಾಸ್‌ರವರ ವಿರೋಧ ಇದ್ದರೆ ಅದನ್ನು ನಾವು ಒಪ್ಪುವುದೇ? ಇಲ್ಲ. ಎಲ್ಲಾ ನಗರಗಳಲ್ಲೂ ಬೆಳವಣಿಗೆ ಆಗಬೇಕು.

- ಗೊಂದಲ -

ಶ್ರೀ ಮಲ್ಲಿಕಾರ್ಜುನ ಖರ್ಗೆ :- ರಾಜ್ಯದ ಜನತೆಗೆ ರಾಂಗ್ ಮೆಸೇಜ್ ಹೋಗಬಾರದು ಇದು ಒಂದು ಒಳ್ಳೆಯ ಕೆಲಸ ಆಗತಕ್ಕಂಥದ್ದು ಮತ್ತು ಇಡೀ ರಾಜ್ಯದ ಹಳ್ಳಿಗಳಿಗೆ, ಪಟ್ಟಣಗಳಿಗೆ ಕೂಡ ಇನ್‌ಫಾಸ್ಟ್ರಕ್ಚರ್‌ಗೆ ಸಹಾಯ ಮಾಡತಕ್ಕಂಥದ್ದು ಇದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ 28ನೇ ಪುಟದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ:-

" I propose to earmark Rs. 143 crorefrom the State's revenues for transfer to the Infrastructure Intiative Fund. Out of the total accruals to the fund, one-third would continue to the earmarked for the BMRTL. The remaining two-thirds would be used for various infrastructure projects across the state.

ಉಳಿದ ಮೂರನೇ ಎರಡು ಭಾಗದ್ದು ನಮಗೆಲ್ಲರಿಗೂ ಗೊತ್ತಿದೆ. ಆದರೆ ಇಲ್ಲಿ ಏನಾಗಿದೆಯೆಂದರೆ, ಬೇಡ ಬೇಡ ಬೇಡ ಎನ್ನುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ನೋ, ನೋ, ನೀವೇನು ಈಗ ಇಂಪೋಸ್ ಮಾಡುತ್ತಿದ್ದೀರಿ ಆ ಟ್ಯಾಕ್ಸ್ ಎಂಟೈರ್ ಸ್ಟೇಟ್ ಮೇಲೆ ಬರ್ಡನ್ ಆಗುತ್ತಿದೆ. ಎಲ್ಲರಿಗೂ ಆದರ ಬರ್ಡನ್ ಬೀಳುತ್ತಿದೆ. ಆದರ ಬಗ್ಗೆ ಸ್ಪಷ್ಟೀಕರಣ ಕೊಡಿ ಎಂದರೆ, ಸ್ಪಷ್ಟೀಕರಣ ಕೊಡುವುದಕ್ಕೆ ಅವರು ತಯಾರಿಲ್ಲ. ರಾಮದಾಸ್ ರವರು ಹೇಳುತ್ತಿರುವುದು ಅದನ್ನೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಅದನ್ನೇ ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್ :- ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಬಹುದಾಗಿತ್ತು. ಇಲ್ಲದಿದ್ದರೆ ಡೀಟೈಲ್ಸ್ ಕೊಡುತ್ತೇನೆ ಎಂದು ಹೇಳಬಹುದಾಗಿತ್ತು. ಎಷ್ಟು ಕಲೆಕ್ಟ್ ಆಗಿದೆ ಎನ್ನುವಂಥದ್ದರ ಬಗ್ಗೆ ಡೀಟೈಲ್ಸ್ ಕೊಡುತ್ತೇನೆ ಎಂದು ಹೇಳಬಹುದಾಗಿತ್ತು. ಎಂಟೈರ್ ಸ್ಟೇಟ್‌ನಲ್ಲಿ ಸೆಸ್ ಕಲೆಕ್ಷನ್ ಮಾಡುವುದರಿಂದ ಅದರ ಬರ್ಡನ್ ಎಲ್ಲರ ಮೇಲಿ ಬೀಳುತ್ತದೆ ಎಂಬುದೇ ಅವರ ಕನ್‌ಟೆನ್‌ಶನ್ ಆಗಿದೆ. ಅದರ ಬಗ್ಗೆ ನೀವು ಕ್ಲಾರಿಫೈ ಮಾಡಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ಈ ಮಸೂದೆ ನಮ್ಮ ಸರ್ಕಾರವಿದ್ದಾಗ 1998ರಲ್ಲಿ ತಂದಂಥದ್ದು. ಅವತ್ತು ನಾವು ಇನ್‌ಫ್ರಾಸ್ಟ್ರಕ್ಚರ್ ಸಲುವಾಗಿ ಇದನ್ನು ತಂದಂಥ ಉದ್ದೇಶ ಏನು ಎಂದರೆ ಇದಕ್ಕೆ ಏನು corpus ಎಂದು ಬಿಲ್ಡ್‌ಫ್ ಆಗುತ್ತದೆ ಆ 200 ಕೋಟಿ ರೂ ಅಥವಾ 300 ಕೋಟಿ ರೂ. ಇದರ ಮೇಲೆ ನಾವು ಬಾರೋ ಮಾಡುವಂಥದ್ದು, ಟೋಟಲ್ ಡೆವಲಪ್‌ಮೆಂಟ್‌ಗೆ. Now they are extending to other places.With that intention, amendment to the Act was brought by the government. ಇಲ್ಲಿ ಪಿ.ಡಬ್ಲೂ.ಡಿ. ಮಿನಿಸ್ಟರ್ ಮಾನ್ಯ ಧರ್ಮಸಿಂಗ್‌ರವರು ಇದ್ದಾರೆ ಸೆಂಟ್ರಲ್ ರೋಡ್ ಫಂಡ್ ಸ್ಕಾಮಿ, Rs. 60 crores we have got. That amount we are spending on development of roads. That was the intendtion of the government. ಅದನ್ನೇ ನಾನು ಹೇಳಬೇಕು ಎಂದು ಕೊಂಡಿದ್ದು.

ಅಧ್ಯಕ್ಷರು :- ಥ್ಯಾಂಕ್ಸ್, ಆಯಿತಲ್ಲಾ, ಬಿಲ್ ಪಾಸ್ ಆಯಿತಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ :- ಕಲೆಕ್ಷನ್ ರಾಜ್ಯ ವ್ಯಾಪ್ತಿ ಬರುತ್ತಿತ್ತು. ಖರ್ಚು ಬೆಂಗಳೂರು ನಗರಕ್ಕೆ ಆಗುತ್ತಿತ್ತು. Now we are extending infrastructure development to other places.....

ಶ್ರೀ ಶಿವಾನಂದ ಪಾಟೀಲ್: - ರಾಜ್ಯಕ್ಕೆ ಇದು ಹೊಸ ತೆರಿಗೆ.

ಶ್ರೀ ಡಿ.ಬಿ. ಚಂದ್ರೇಗೌಡ - ನಾನು ಆಗಲೇ ಹೇಳಿದ್ದೇನೆ. ಇದು ಹೊಸ ತೆರಿಗೆಯಲ್ಲ, ಹೊಸ ತೆರಿಗೆಯಲ್ಲ, ಹೊಸ ತೆರಿಗೆಯಲ್ಲ ಹಳೆಯ ತೆರಿಗೆಯನ್ನೇ, we are extending infrastructure development to other places of the State. ಬೆಂಗಳೂರಿನಿಂದ ತೆಗೆದುಕೊಂಡು ಹೋಗಿ ನಿಮ್ಮ ಊರಿಗೂ ಕೊಡುತ್ತಾ ಇದ್ದೀವೆ ಎಂಬುದೇ ಆಗಿದೆ. ಅದು ಬೇಡ ಎಂದು ಮಾನ್ಯ ರಾಮದಾಸ್‌ರವರು ಹೇಳಿದರೆ ನಾನೇನ್ಮಾಡಲಿ?

ಅಧ್ಯಕ್ಷರು :- ಆಯಿತು, ಈಗಾಗಲೇ ಬಿಲ್ ಪಾಸಾಯಿತಲ್ಲಾ.

ಶ್ರೀ ಡಿ.ವಿ. ಸದಾನಂದಗೌಡ: - ನಮಗೆ ಕನ್‌ಫ್ಯೂಶನ್ ಬಂದದ್ದು ಏನೆಂದರೆ ತಾವು ಆಗ ಈ ಟ್ಯಾಕ್ಸ್‌ನ್ನು ನಾವು ಬೇರೆ ಕಡೆಯಲ್ಲೂ ಕೂಡ ಕಲೆಕ್ಷನ್ ಮಾಡುತ್ತೇವೆ ಎಂದು ಹೇಳುವಂಥ ಒಂದು ಹೊಸ ವಿಚಾರವನ್ನು ಪ್ರಸ್ತಾಪ ಮಾಡಿದಿರಿ. ಹಿಂದೆ ಕಲೆಕ್ಷನ್ ಆಗುತ್ತಿತ್ತು. ಆದರೆ ಅದು ಬೆಂಗಳೂರಿನಲ್ಲಿ ಖರ್ಚಾಗುತ್ತಿತ್ತು. ಆದರೆ ಈಗ ರಾಜ್ಯಮಟ್ಟದಲ್ಲಿ ಅದು ವಿಸ್ತರಣೆಯಾಗುತ್ತಿದೆ ಎಂದು ಈಗ ಹೇಳಿದಿರಿ. ಇದನ್ನು ಲೇಟರ್ ಸ್ಟೇಜ್‌ನಲ್ಲಿ ಹೇಳಿದಿರಿ.

ಅಧ್ಯಕ್ಷರು :- ಕನ್‌ಫ್ಯೂಶನ್ ನಿಮಗೆ ಕ್ಲಿಯರ್ ಆಯಿತಲ್ಲಾ ಬಿಡಿ ಗೌಡ್ರೆ. ಈಗ ಕರ್ನಾಟಕ ಸ್ಟಾಂಪು (ತಿದ್ದುಪಡಿ) 2002ರ ಮಸೂದೆಯನ್ನು ಪರ್ಯಾಲೋಚನೆಗೆ ಸಚಿವರು ಮಂಡಿಸಬೇಕು.